# ಚಿಣ್ಣರ ಜಿಲ್ಲಾ ದರ್ಶನ - ಚಾಮರಾಜನಗರ

## ಮೊದಲ ಮಾತು

ಗುಣಮಟ್ಟದ ಶಿಕ್ಷಣಕ್ಕಾಗಿ ಸರ್ವಶಿಕ್ಷಣ ಅಭಿಯಾನದಿಂದ ಕೈಗೊಂಡಿರುವ "ಚಿಣ್ಣರ ಜಿಲ್ಲಾದರ್ಶನ"ವು ಮಗುವಿನ ಪರಿಪೂರ್ಣ ವ್ಯಕ್ತಿತ್ವ ವಿಕಸನ, ಗುಣಾತ್ಮಕ ಕಲಿಕೆ ಹಾಗೂ ಸ್ಥಳೀಯ ವೈವಿಧ್ಯಮಯ ಪ್ರಾಕೃತಿಕ, ಐತಿಹಾಸಿಕ, ಸಾಹಿತ್ಯಿಕ, ಧಾರ್ಮಿಕ, ಸಾಂಸ್ಕೃತಿಕ ಅರಿವನ್ನು ವಿದ್ಯಾರ್ಥಿ ದಿಸೆಯಲ್ಲಿಯೇ ಮೂಡಿಸಿ ಪರಿಪೂರ್ಣ ನಾಗರೀಕನನ್ನಾಗಿ ಸೃಜಿಸುವುದೇ ಈ ಕಾರ್ಯಕ್ರಮದ ಉದ್ದೇಶವಾಗಿದೆ. ಇದರಿಂದಾಗಿ ಶಾಲೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಪ್ರತಿಭಾವಂತ ವಿದ್ಯಾರ್ಥಿಗಳ ಹಾಜರಾತಿ ಹಾಗೂ ಶೈಕ್ಷಣಿಕ ಪ್ರಗತಿಗೆ ದಿಕ್ಸೂಚಿಯಾಗಿದೆ.

"ದೇಶ ಸುತ್ತ, ಕೋಶ ಓದು" ನಾಣ್ಣುಡಿಯ ಹಿನ್ನೆಲೆಯಲ್ಲಿ ಚಿಣ್ಣರ ಕರ್ನಾಟಕ ದರ್ಶನ ಮಗುವಿನ ಜ್ಞಾನಕ್ಷಿತಿಜವನ್ನು ದ್ವಿಮುಖಿಯಾಗಿಸಬಲ್ಲದು. ಸಾಂಸ್ಕೃತಿಕ ಪರಂಪರೆ, ವೈಜ್ಞಾನಿಕ ದೃಷ್ಟಿಕೋನ, ಕಲೆ ಸಾಹಿತ್ಯದ ಬಗ್ಗೆ ಮಗುವಿನಲ್ಲಿ ವೈಚಾರಿಕತೆಯ ಬೆಳಕನ್ನು ಚೆಲ್ಲುತ್ತದೆ. ಮಗುವು ತನ್ನ ಸುತ್ತಲಿನ ತಾಲ್ಲೂಕು ಮತ್ತು ಜಿಲ್ಲೆಯ ಪರಿಸರವನ್ನು ಅರಿಯಬೇಕು. ತನ್ನ ಜಿಲ್ಲೆಯ ಸಾಂಸ್ಕೃತಿಕ ಹಿರಿಮೆಯನ್ನು, ಜನಪದ ಹಾಗೂ ಶಿµ಼ಂಔ ಸಾಹಿತ್ಯದ ಕಂಪನ್ನೂ ಪ್ರಾಕೃತಿಕ, ಐತಿಹಾಸಿಕ, ಧಾರ್ಮಿಕ ಮಹತ್ವವನ್ನು ಅರಿಯಬೇಕೆಂಬ ಸದುದ್ದೇಶದಿಂದ "ಚಾಮರಾಜನಗರ ಜಿಲ್ಲಾದರ್ಶನ" ಪ್ರವಾಸಕ್ಕೆ ಅನುಕೂಲವಾಗುವಂತೆ ಪ್ರಸ್ತುತ ಕೈಪಿಡಿಯನ್ನು ರೂಪಿಸಲಾಗಿದೆ.

ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಶಿಕ್ಷಕರು ಹಾಗೂ ವಿವಿಧ ಹಂತದ ಅಧಿಕಾರಿಗಳು ಪ್ರಸ್ತುತ ಕೈಪಿಡಿಯನ್ನು ಸದುಪಯೋಗಪಡಿಸಿಕೊಳ್ಳುವರೆಂದು ಆಶಿಸಿದೆ. ಜಿಲ್ಲೆಯ ಪ್ರವಾಸ ಚಿಣ್ಣರಿಗೆ ಸಂತಸವು, ಸುಖಕರವೂ ಆಗಿರಲೆಂದು ಹಾರೈಸುತ್ತೇವೆ.

**(ಎಸ್.ಜಿ. ಸತ್ಯನಾರಾಯಣ)**
ಪ್ರಾಂಶುಪಾಲರು
ಡಯಟ್, ಚಾಮರಾಜನಗರ.

**(ಎನ್.ಎ. ರಾಮಸ್ವಾಮಿ)**
ಉಪನಿರ್ದೇಶಕರು
ಚಾಮರಾಜನಗರ.

**(ಕೆ. ಸುಂದರನಾಯ್ಕ)**
ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು
ಚಾಮರಾಜನಗರ

# ರಚನಾ ತಂಡ

**ಮಾರ್ಗದರ್ಶನ : ಶ್ರೀ ಎಸ್.ಜೆ. ಸತ್ಯನಾರಾಯಣ**
ಪ್ರಾಂಶುಪಾಲರು ಡಯಟ್

**ಕಾರ್ಯಕ್ರಮ ಆಯೋಜನೆ :** ಸಿ.ಎಂ.ಡಿ.ಇ. ವಿಭಾಗ, ಡಯಟ್

**ಚಾಮರಾಜನಗರ :** ೧. ಶ್ರೀ ಬಸವರಾಜು
೨. ಶ್ರೀ ಮಂಜುನಾಥಸ್ವಾಮಿ
೩. ಶ್ರೀಮತಿ ಸುವರ್ಣಕುಮಾರಿ
೪. ಶ್ರೀ ರವಿಕುಮಾರ್

**ಗುಂಡ್ಲುಪೇಟೆ :** ೧. ಶ್ರೀ ರಾಜಶೇಖರ್ ಪಿ.ಸಿ.

**ಕೊಳ್ಳೇಗಾಲ :** ೧. ಶ್ರೀ ಶಾಂತಮೂರ್ತಿ
೨. ಶ್ರೀಮತಿ ನಾಗಲಾಂಬ
೩. ಶ್ರೀ ಶಿವಣ್ಣ ಇಂದ್ವಾಡಿ

**ಹನೂರು :** ೧. ಶ್ರೀ ಎಂ. ಗುರುಸ್ವಾಮಿ
೨. ಶ್ರೀ ರಾಜು ಪಿ.

**ಯಳಂದೂರು :** ೧. ಶ್ರೀ ನಟರಾಜು
೨. ಶ್ರೀ ಪುಟ್ಟರಾಜು

**ಸಹಕಾರ**
**ಜಿಲ್ಲಾ ಪ್ರವಾಸೋದ್ಯಮ ಇಲಾಖೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
**ಚಾಮರಾಜನಗರ**

# ದೂರವಾಣಿ ಸಂಖ್ಯೆಗಳು

**ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆಗಳು**

**ಉಪನಿರ್ದೇಶಕರು** (ಆಡಳಿತ) ೬೪೪೮೬೬೩೩೨

**ಉಪನಿರ್ದೇಶಕರು** (ಅಭಿವೃದ್ಧಿ) ೬೪೪೮೬೬೩೮೩

**ಜಿಲ್ಲಾಯೋಜನಾ** ಉಪ ಸಮನ್ವಯಾಧಿಕಾರಿ ೯೪೪೮೯೯೩೯೦

**ಚಾಮರಾಜನಗರ** ಬಿ.ಇ.ಓ ೯೪೮೦೬೯೫೧೦೬ ಬಿ.ಆರ್.ಸಿ. ೯೪೮೦೬೯೫೧೧೧

**ಗುಂಡ್ಲುಪೇಟೆ** ಬಿ.ಇ.ಓ. ೯೪೮೦೬೯೫೧೦೭ ಬಿ.ಆರ್.ಸಿ. ೯೪೮೦೬೯೫೧೧೨

**ಕೊಳ್ಳೇಗಾಲ** ಬಿ.ಇ.ಓ ೯೪೮೦೬೯೫೧೦೯ ಬಿ.ಆರ್.ಸಿ. ೯೪೮೦೬೯೫೧೧೪

**ಹನೂರು** ಬಿ.ಇ.ಓ. ೯೪೮೦೬೯೫೧೦೮ ಬಿ.ಆರ್.ಸಿ. ೯೪೮೦೬೯೫೧೧೩

**ಯಳಂದೂರು** ಬಿ.ಇ.ಓ. ೯೪೮೦೬೯೫೧೧೦ ಬಿ.ಆರ್.ಸಿ. ೯೪೮೦೬೯೫೧೧೫

# ವಿದ್ಯಾರ್ಥಿಗಳಿಗೆ ಉಚಿತ ಶೈಕ್ಷಣಿಕ ಪ್ರವಾಸ ಕಾರ್ಯಕ್ರಮ

ಶಿಕ್ಷಣ ಪ್ರತಿಯೊಂದು ಮಗುವಿನ ಮೂಲಭೂತ ಹಕ್ಕುಗಳಲ್ಲಿ ಒಂದು. ಶಾಲಾ ವಯಸ್ಸಿನ ಎಲ್ಲಾ ಮಕ್ಕಳನ್ನು ಶಾಲೆಗೆ ದಾಖಲಿಸಿ ಪ್ರಾಥಮಿಕ ಶಿಕ್ಷಣವನ್ನು ಅರ್ಥಪೂರ್ಣವಾಗಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಪೂರ್ಣಗೊಳಿಸುವ ಉದ್ದೇಶದಿಂದ ಅನೇಕ ಪರಿಣಾಮಕಾರಿ ಅನುಭವಗಳನ್ನು ನೀಡುವುದರೊಂದಿಗೆ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಾಲುಗಾರಿಕೆಯ ಬೃಹತ್ ಯೋಜನೆಯಾದ ಸರ್ವ ಶಿಕ್ಷಣ ಅಭಿಯಾನ ಯೋಜನೆಯ ಗುರಿ ಸಾಧಿಸಲು ಮೇಲ್ಕಂಡ ವಿವಿಧೋದ್ದೇಶ ಚಟಿವಟಿಕೆಗಳನ್ನು ಆಯೋಜಿಸಿದೆ. ಈ ನಿಟ್ಟಿನಲ್ಲಿ ೫,೬, ಮತ್ತು ೭ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಸರ್ಕಾರಿ ಶಾಲೆಗಳ ಆಯ್ದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹಾಗೂ ಇತರೆ ಹೆಣ್ಣು ಮಕ್ಕಳಿಗಾಗಿ **"ಚಿಣ್ಣರ ಸುವರ್ಣ ಜಿಲ್ಲಾ ದರ್ಶನ"** ಎಂಬ ಶೈಕ್ಷಣಿಕ ಪ್ರವಾಸ ಕಾರ್ಯಕ್ರಮವನ್ನು ಸರ್ವ ಶಿಕ್ಷಣ ಅಭಿಯಾನ, ಹಾಗೂ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮಂಡ್ಯ ಇವರ ಸಹಯೋಗದೊಂದಿಗೆ ಅನುಷ್ಠಾನಗೊಳ್ಳುತ್ತಿದೆ.

**ಪ್ರವಾಸದ ಪ್ರಾಮುಖ್ಯತೆ :**

- ವೈವಿಧ್ಯಮಯ ಜನಜೀವನ, ಶಿಲ್ಪಕಲೆ, ಐತಿಹಾಸಿಕ ಕಟ್ಟಡಗಳ ಬಗ್ಗೆ ಧನಾತ್ಮಕ ಮನೋಭಾವನೆಗಳ ಸಂವರ್ಧನೆ.
- ವಿವಿಧ ಪ್ರದೇಶಗಳ ಸಂಸ್ಕೃತಿ ಹಾಗೂ ಪರಂಪರೆಗಳ ಪರಿಚಯ ಮತ್ತು ನಾಡು-ನುಡಿ ಕುರಿತಾಗಿ ಅಭಿಮಾನ ಬೆಳೆಸುವುದು.
- ವಾಸ್ತವ ಜೀವನ ಕುರಿತ ಮನೋಭಾವನೆಯಲ್ಲಿ ಬದಲಾವಣೆ.
- ಸಹಬಾಳ್ವೆ ಹಾಗೂ ಸಹಭಾಗಿತ್ವದ ಮಹತ್ವ ತಿಳಿಸುವುದು.
- ಇತರೆ ಧರ್ಮ, ಜಾತಿ ಹಾಗೂ ಪ್ರಾಂತ್ಯದ ಜನರೊಂದಿಗೆ ಸಂವೇದನೆ ಮತ್ತು ಸಹಕಾರ ಮನೋಭಾವ ಬೆಳೆಸುವುದು.
- ತನ್ನ ಸ್ಥಾನ ಹಾಗೂ ಕರ್ತವ್ಯಗಳ ಬಗ್ಗೆ ಅರಿವನ್ನು ಉಂಟುಮಾಡುವುದು.
- ಸರ್ವತೋಮುಖ ವ್ಯಕ್ತಿತ್ವ ವಿಕಾಸವನ್ನುಂಟು ಮಾಡುವುದು.

ವೈಜ್ಞಾನಿಕ ಹಾಗೂ ತಾಂತ್ರಿಕ ಅಭಿವೃದ್ಧಿಯ ಬಗ್ಗೆ ಜ್ಞಾನವನ್ನು ಪಡೆಯುವುದು.

**ವಿದ್ಯಾರ್ಥಿ ಜೀವನದಲ್ಲಿ ಶೈಕ್ಷಣಿಕ ಪ್ರವಾಸದ ಅಗತ್ಯತೆ**

- ಮಕ್ಕಳು ಶಿಕ್ಷಣದಲ್ಲಿ ಆಸಕ್ತಿ ಬೆಳೆಸಿಕೊಂಡು ಪಠ್ಯೇತರ ಹಾಗೂ ಶೈಕ್ಷಣಿಕ ಚಟುವಟಿಕೆಗಳಲ್ಲಿ ಹೆಚ್ಚು ಉತ್ಸಾಹದಿಂದ ಭಾಗವಹಿಸುವುದು.
- ಮಕ್ಕಳು ಶಾಲೆಯತ್ತ ಹೆಚ್ಚು ಆಕರ್ಷಿತರಾಗಿ ಹಿರಿಯ ಪ್ರಾಥಮಿಕ ಹಂತದಲ್ಲಿ ಶಾಲೆ ಬಿಡುವ ಸಾಧ್ಯತೆಗಳನ್ನು ಕಡಿಮೆ ಮಾಡುವುದು.
- ಮಕ್ಕಳಲ್ಲಿ ಪಠ್ಯವಸ್ತುವಿನ ಸಾಮರ್ಥ್ಯಗಳ ಬೆಳವಣಿಗೆಗೆ ಸಹಕಾರಿಯಾಗುವುದು.
- ವಿದ್ಯಾರ್ಥಿಗಳಲ್ಲಿ ವೀಕ್ಷಣೆ, ಮೌಖಿಕ ಹಾಗೂ ಲಿಖಿತ ಕೌಶಲಗಳ ಸಂವರ್ಧನೆ ಮಾಡುವುದು.
- ಮಕ್ಕಳಲ್ಲಿ ಕೀಳರಿಮೆ ಹೋಗಲಾಡಿಸುವುದು.
- ಮಕ್ಕಳಲ್ಲಿ ಸಹಬಾಳ್ವೆಯ ಮಹತ್ವ ಬೆಳೆಸುವುದು.
- ಸ್ವಾಭಾವಿಕ ಸನ್ನಿವೇಶಗಳ ಮುಖಾಂತರ ಶಿಕ್ಷಣವನ್ನು ದೊರಕಿಸುವುದು.
- ಮಕ್ಕಳಲ್ಲಿ ಜ್ಞಾನ, ಕಲಾಭಿರುಚಿ ಹಾಗೂ ಕುತೂಹಲಗಳನ್ನು ಬೆಳೆಸುವುದು.
- ಪಠ್ಯಪುಸ್ತಕದಲ್ಲಿನ ಮಾಹಿತಿ ಹಾಗೂ ಹೊರ ಪ್ರಪಂಚದ ವಾಸ್ತವ್ಯದ ನಡುವೆ ಇರುವ ಅಂತರವನ್ನು ಅರ್ಥೈಸುವುದು.
- ಸೆಮಿಸ್ಟರ್ ಪದ್ಧತಿಯ ಗುಂಪು ಚಟುವಟಿಕೆ ಹಾಗೂ ವೈಯಕ್ತಿಕ ಚಟುವಟಿಕೆಗಳನ್ನೊಳಗೊಂಡ ಯೋಜನೆಗಳನ್ನು ತಯಾರಿಸಲು ಮಕ್ಕಳಲ್ಲಿ ಮನೋಸ್ಥೈರ್ಯ ಬೆಳೆಸುವುದು.
- ವಿವಿಧ ಪ್ರದೇಶಗಳ ಸಂಸ್ಕೃತಿ ಪರಂಪರೆ, ನಾಡು-ನುಡಿಯನ್ನು ಪರಿಚಯಿಸುವುದು.
- ಮಕ್ಕಳ ಸೃಜನಾತ್ಮಕ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು.
- ಕಲಿಯುವಿಕೆಗೆ ಸ್ವತಂತ್ರವಾದ ವಾತಾವರಣವನ್ನು ನಿರ್ಮಿಸುವುದು.
- ಕಲಿಕೆಯನ್ನು ಶಾಶ್ವತಗೊಳಿಸುವುದು.
- ವಿದ್ಯಾರ್ಥಿಗಳನ್ನು ಸ್ವಯಂ ಪ್ರೇರಣೆಯಿಂದ ಪಾಲ್ಗೊಳ್ಳಲು ಪ್ರೋತ್ಸಾಹಿಸುವುದು.

ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಭಾವನೆ, ಸಮಾಜ ಸೇವೆ ಭಾವೈಕ್ಯತೆ, ದೇಶಪ್ರೇಮ ಮುಂತಾದ ಸದ್ಗುಣಗಳನ್ನು ಬೆಳೆಸುವುದು.

**ಪ್ರವಾಸದ ಸ್ಥಳಗಳ ಆಯ್ಕೆ :**

ಐತಿಹಾಸಿಕ, ಧಾರ್ಮಿಕ, ನೈಸರ್ಗಿಕ ಹಾಗೂ ಶೈಕ್ಷಣಿಕ ಮಹತ್ವದ ಜಿಲ್ಲೆಯಲ್ಲಿನ ಪ್ರೇಕ್ಷಣೀಯ ಸ್ಥಳಗಳು.

ವಿದ್ಯಾರ್ಥಿಗಳಿಗೆ ಹೊಸ ಅನುಭವವನ್ನು ನೀಡುವ ರಾಜ್ಯದಲ್ಲಿನ ದೂರದ ಪ್ರದೇಶಗಳು

**ಪ್ರವಾಸದ ಮುಖ್ಯಾಂಶಗಳು :**

- ಎರಡು ದಿನ ಹಾಗೂ ಒಂದು ರಾತ್ರಿಯ ಉಚಿತ ಪ್ರವಾಸ.
- ಉತ್ತಮವಾದ ಊಟ, ಕಾಫಿ, ತಿಂಡಿ, ವಸತಿ ಇತ್ಯಾದಿ.
- ಎಲ್ಲಾ ಪ್ರೇಕ್ಷಣೀಯ ಸ್ಥಳಗಳಲ್ಲಿ ಉಚಿತ ಪ್ರವೇಶ ವ್ಯವಸ್ಥೆ.

- ಪ್ರತಿ ತಂಡಕ್ಕೆ ಅನುಭವಿ ಶಿಕ್ಷಕರು ಹಾಗೂ ಪ್ರವಾಸೋದ್ಯಮ ಇಲಾಖೆಯ ಮಾರ್ಗದರ್ಶಕರು.
- ಪ್ರವಾಸದ ಅವಧಿಯಲ್ಲಿ ತಾಲ್ಲೂಕು, ಜಿಲ್ಲೆಯಲ್ಲಿನ ಮಾಹಿತಿ ಕೇಂದ್ರಗಳು.
- ಪ್ರಥಮ ಚಿಕಿತ್ಸೆ ಸೌಲಭ್ಯ.
- ಪ್ರತಿ ತಂಡದ ಮೌಲ್ಯಮಾಪನ ಮತ್ತು ದಾಖಲೀಕರಣ. ಮಕ್ಕಳಿಗೆ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಿ ವಿಜೇತ ಮಕ್ಕಳಿಗೆ ಬಹುಮಾನ.
- ಮಾರ್ಗಸೂಚಿ, ಜಿಲ್ಲೆಯ ನಕ್ಷೆ, ನೋಟ್ ಪುಸ್ತಕ, ಪೆನ್, ಚಿತ್ರಕಲೆ ಹಾಗೂ ಇತರೆ ಚಟುವಟಿಕೆಗಳಿಗೆ ಅವಶ್ಯಕ ಲೇಖನ ಸಾಮಗ್ರಿಗಳನ್ನು ಮತ್ತು ಟೋಪಿಗಳನ್ನು ಉಚಿತವಾಗಿ ಒದಗಿಸುವ ವ್ಯವಸ್ಥೆ.

**ವಿದ್ಯಾರ್ಥಿಗಳು ಪ್ರವಾಸದ ಸಮಯದಲ್ಲಿ ಪಾಲಿಸಬೇಕಾದ ನಿಯಮಗಳು :ನೀವು ಪಾಲಿಸಬೇಕಾದ ಅಂಶಗಳು :**

- ಬಸ್ಸಿನಲ್ಲಿ ಪ್ರಯಾಣ ಮಾಡುವಾಗ ಸುತ್ತಲಿನ ಪರಿಸರವನ್ನು ತಪ್ಪದೆ ಗಮನಿಸಬೇಕು.
- ವಿವಿಧ ಸ್ಥಳಗಳಲ್ಲಿ ಜನರ ಭಾಷೆ, ಧರಿಸುವ ಉಡುಪು, ಗುಣ-ನಡತೆ, ಆದರ-ಸತ್ಕಾರಗಳು, ಜೀವನ ಶೈಲಿ, ತಿಂಡಿ-ತಿನಿಸುಗಳಲ್ಲಿ ಇರುವ ವೈವಿಧ್ಯತೆಗಳನ್ನು ಗಮನಿಸಬೇಕು.
- ಪ್ರತಿ ದಿನದ ದಿನಚರಿಯನ್ನು ಬರೆಯುವುದು.
- ಸ್ಥಳಗಳ ಬಗ್ಗೆ ಮಾಹಿತಿಯನ್ನು ಶಿಕ್ಷಕರಿಂದ ಅಥವಾ ಮಾರ್ಗದರ್ಶಕರಿಂದ ಕೇಳಿ ತಿಳಿಯಬೇಕು.
- ವೇಳಾಪಟ್ಟಿಯಂತೆ, ವಿದ್ಯಾರ್ಥಿ ಗುಂಪಿನ ನಾಯಕರು, ಪ್ರವಾಸಿ ಮಾರ್ಗದರ್ಶಕರು ಹಾಗೂ ಶಿಕ್ಷಕರು ನೀಡುವ ಸೂಚನೆಯಂತೆ ಸಮಯ ಪಾಲನೆ ಮಾಡಬೇಕು.
- ಪ್ರವಾಸದಲ್ಲಿ ನಿಮಗೆ ಅಥವಾ ನಿಮ್ಮ ಸ್ನೇಹಿತರಿಗೆ ಉಂಟಾಗುವ ತೊಂದರೆಗಳಿಗೆ ಕೂಡಲೇ ಶಿಕ್ಷಕರನ್ನು ಸಂಪರ್ಕಿಸಬೇಕು.
- ಬಸ್ಸಿನಿಂದ ಇಳಿದು ಸ್ಥಳಗಳ ವೀಕ್ಷಣೆಗೆ ಸಾಲಾಗಿ ಸಾಗಬೇಕು.
- ನೀರು ಅಥವಾ ಇಳಿಜಾರು ಸ್ಥಳಕ್ಕೆ ಭೇಟಿ ನೀಡಿದಾಗ ಶಿಕ್ಷಕರು ನೀಡುವ ಸೂಚನೆಗಳನ್ನು ಪಾಲಿಸಿ ಎಚ್ಚರದಿಂದಿರಬೇಕು.
- ಚಳಿಗಾಲದಲ್ಲಿ ಬೆಚ್ಚನೆಯ ಉಡುಪುಗಳನ್ನು ಒಯ್ಯುವುದು.
- ಪ್ರವಾಸ ಕಾಲದಲ್ಲಿ ವೈಯಕ್ತಿಕ ಕೆಲಸವನ್ನು ಪ್ರತಿಯೊಬ್ಬರು ತಾವೇ ನಿರ್ವಹಿಸಬೇಕು.
- ಶುಚಿಯಾದ ನೀರನ್ನೇ ಕೇಳಿ ಪಡೆದು ಕುಡಿಯಬೇಕು.
- ನಿಮಗೆ ಹಂಚಿಕೆ ಮಾಡಲಾಗುವ ಮಲಗುವ ಕೋಣೆಯಲ್ಲಿಯೇ ನೀವು ಮಲಗಬೇಕು.
- ಪ್ರತಿ ದಿನದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಎಲ್ಲರೂ ಭಾಗವಹಿಸಬೇಕು.
- ನಿಮ್ಮ ವಸ್ತುಗಳ ಬಗ್ಗೆ ಎಚ್ಚರಿಕೆ ವಹಿಸಬೇಕು.
- ಕುಡಿಯುವ ನೀರು ಹಾಗೂ ಒಂದು ಕೈ ಒರೆಸುವ ಬಟ್ಟೆ ನಿಮ್ಮ ಕೈಗೆ ಕೂಡಲೆ ಸಿಗುವಂತೆ ಇಟ್ಟುಕೊಳ್ಳಿ.
- ನಿಮ್ಮ ಶಿಕ್ಷಕರು ಹಾಜರಾತಿಯನ್ನು ತೆಗೆದುಕೊಳ್ಳುವಾಗ ನಿಶ್ಯಬ್ದತೆಯಿಂದ ಇರಬೇಕು.
- ಪ್ರತಿ ಮುಂಜಾನೆ ಹಾಗೂ ರಾತ್ರಿ ಶಿಕ್ಷಕರು ಹೇಳಿಕೊಡುವ ಪ್ರಾರ್ಥನೆಯಲ್ಲಿ ಭಾಗವಹಿಸಬೇಕು.

ವಾತಾವರಣವನ್ನು ಕಲುಷಿತಗೊಳಿಸದಿರಿ. ಶಿಸ್ತು ಮತ್ತು ಸಭ್ಯತೆಯಿಂದ ನಡೆದುಕೊಳ್ಳಬೇಕು.

**ನೀವು ಹೀಗೆ ಮಾಡದಿರಿ**

- ಬಸ್ಸಿನ ಕಿಟಕಿಗಳಿಂದ ತಲೆ ಅಥವಾ ಕೈಗಳನ್ನು ಹೊರ ಚಾಚಬಾರದು.

- ಬೆಲೆ ಬಾಳುವ ವಸ್ತು/ಆಭರಣಗಳನ್ನು ಕೊಂಡೊಯ್ಯಬಾರದು.
- ಪ್ರವಾಸ ಸಮಯದಲ್ಲಿ ಅಂಗಡಿ ತಿಂಡಿಗಳನ್ನಾಗಲಿ ಅಥವಾ ಮನೆಯಿಂದ ತಂದ ಕರಿದ ತಿಂಡಿಗಳನ್ನು ತಿನ್ನಬಾರದು.
- ಅರ್ಧರಾತ್ರಿಯಲ್ಲಿ ಒಬ್ಬರೆ ಎದ್ದು ಹೊರಗೆ ಹೋಗಬಾರದು.
- ನೀವು ಕೋಪ ಮಾಡಿಕೊಳ್ಳುವುದಾಗಲಿ/ತುಂಟತನವನ್ನಾಗಲಿ ಮಾಡಿಕೊಳ್ಳಬಾರದು.

**ಶಿಕ್ಷಕರಿಗೆ ಮಾರ್ಗಸೂಚಿ ಮತ್ತು ಸೂಚನೆಗಳು, ನಿರ್ವಹಿಸಬೇಕಾದ ಅಂಶಗಳು**

- ಪ್ರವಾಸ ಕಾಲದಲ್ಲಿ ಮಗುವಿಗೆ ಕಲಿಯುವ ಅನುಭವಗಳನ್ನು ಹಾಗೂ ವಾತಾವರಣವನ್ನು ಸೃಷ್ಟಿಸಬೇಕು.
- ಪ್ರತಿಯೊಂದು ಮಗುವನ್ನು ಸಮಾನವಾಗಿ ಕಂಡು ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಬೇಕು.
- ವಿದ್ಯಾರ್ಥಿಗಳಿಗೆ ಯಾವುದೇ ಸಂದರ್ಭದಲ್ಲಿ ತೊಂದರೆಯಾಗದಂತೆ ಶಿಕ್ಷಕರು ಜವಾಬ್ದಾರಿಯನ್ನು ವಹಿಸಬೇಕು.
- ವಿದ್ಯಾರ್ಥಿಗಳು ಬಸ್ಸಿನ ಕಿಟಕಿಗಳಿಂದ ಕೈ ಅಥವಾ ತಲೆಯನ್ನು ಹೊರಚಾಚದಂತೆ ಎಚ್ಚರಿಕೆ ವಹಿಸಬೇಕು.
- ವಿದ್ಯಾರ್ಥಿಗಳನ್ನು ತಂಡಗಳಾಗಿ ವಿಂಗಡಿಸಿ ಹೆಣ್ಣು ಮಕ್ಕಳ ಗುಂಪಿನ ಜವಾಬ್ದಾರಿಯನ್ನು ಶಿಕ್ಷಕಿಯರು ವಹಿಸಬೇಕು.
- ಪ್ರತಿ ಹಂತದಲ್ಲಿ ವಿದ್ಯಾರ್ಥಿಗಳ ಹಾಜರಾತಿ ಪರೀಕ್ಷಿಸಬೇಕು.
- ಎಲ್ಲಾ ಶಿಕ್ಷಕರು ಸಹಕಾರ ಮನೋಭಾವದಿಂದ ಹೊಣೆಗಾರಿಕೆಯನ್ನು ನಿರ್ವಹಿಸಬೇಕು.
- ವಿದ್ಯಾರ್ಥಿಗಳು ಸಮಯಕ್ಕೆ ಸರಿಯಾಗಿ ಸಿದ್ದರಾಗಲು ಪ್ರೇರೇಪಿಸಬೇಕು.
- ಪ್ರತಿ ಮಗುವಿನ ಹಿನ್ನೆಲೆಯನ್ನು ಅರಿಯಲು ಪ್ರಯತ್ನಿಸಬೇಕು ಹಾಗೂ ಅಗತ್ಯ ಸಹಕಾರವನ್ನು ನೀಡಬೇಕು.
- ಹೆಣ್ಣು ಮಕ್ಕಳ ಕೋಣೆಯಲ್ಲಿ ಶಿಕ್ಷಕಿಯರು ಕಡ್ಡಾಯವಾಗಿ ಮಲಗಬೇಕು.
- ಹೆಣ್ಣುಮಕ್ಕಳಲ್ಲಿ ಉಂಟಾಗುವ ತೊಂದರೆಗಳಿಗೆ ಶಿಕ್ಷಕಿಯರು ಗಮನಹರಿಸಬೇಕು.
- ಎಲ್ಲಾ ವಿದ್ಯಾರ್ಥಿಗಳಿಗೆ ನಿಯಮಿತ ಹಾಗೂ ಮಿತವಾದ ಭೋಜನ ಮಾಡುವಂತೆ ತಿಳಿಹೇಳಬೇಕು.
- ವಿದ್ಯಾರ್ಥಿಗಳಿಗೆ ಶುದ್ಧ ನೀರು ಒದಗಿಸಲು ವ್ಯವಸ್ಥೆ ಮಾಡುವುದು.
- ಗಂಭೀರವಾಗಿ ಅನಾರೋಗ್ಯದಿಂದ ಬಳಲುವ ಮಗುವಿನ ಆರೈಕೆ ಶಿಕ್ಷಕರ ಜವಾಬ್ದಾರಿಯಾಗಿರುತ್ತದೆ.
- ನೀರು ಅಥವಾ ಇಳಿಜಾರು ಸ್ಥಳಗಳಲ್ಲಿ ಮಕ್ಕಳ ಬಗ್ಗೆ ಎಚ್ಚರಿಕೆ ವಹಿಸಬೇಕು.
- ಎಲ್ಲಾ ಸ್ಥಳಗಳಲ್ಲಿ ಶಿಸ್ತು ಹಾಗೂ ಸಭ್ಯತೆಯಿಂದ ವರ್ತಿಸಲು ಮಕ್ಕಳಿಗೆ ಪ್ರೇರೇಪಿಸಬೇಕು.
- ಯಾವುದೇ ಮಗು ಗುಂಪನ್ನು ಬಿಟ್ಟು ಹೋಗದಂತೆ ನಿಗಾ ವಹಿಸಬೇಕು.
- ಪ್ರತಿದಿನ ಮುಂಜಾನೆ ಸಾಮೂಹಿಕ ಪ್ರಾರ್ಥನೆ ಮತ್ತು ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು.
- ಪ್ರತಿದಿನದ ದಿನಚರಿಯನ್ನು ವಿದ್ಯಾರ್ಥಿಗಳಾದಿಯಾಗಿ ಶಿಕ್ಷಕರೂ ನಿರ್ವಹಿಸಬೇಕು.
- ಕೆಳಕಂಡ ದಾಖಲೆಗಳನ್ನು ಕಡ್ಡಾಯವಾಗಿ ನಿರ್ವಹಿಸಬೇಕು.
- ಈ ವಿದ್ಯಾರ್ಥಿಗಳ ಹಾಜರಾತಿ ಮತ್ತು ಶಿಕ್ಷಕರ ವಿವರ
- ಈ ದಿನಚರಿ
- ಈ ಸಾಂಸ್ಕೃತಿಕ ಕಾರ್ಯಕ್ರಮಗಳ ವಿವರ
- ಈ ವಿದ್ಯಾರ್ಥಿಗಳು ಬರೆದ ಕವನ/ಚುಟುಕ/ಚಿತ್ರಕಲೆ ಇತ್ಯಾದಿ.
- ಇಡೀ ಪ್ರವಾಸದ ಸಂದರ್ಭದಲ್ಲಿ ಸನ್ನಡತೆಯಿಂದ ನಡೆದುಕೊಂಡು ಸಹಕರಿಸಿದ ವಿದ್ಯಾರ್ಥಿಗಳನ್ನು ಗುರುತಿಸಬೇಕು.
- ವಿದ್ಯಾರ್ಥಿಗಳಿಗೆ ನೀಡಲಾಗುವ ಜಿಲ್ಲೆಯ ನಕ್ಷೆಯಲ್ಲಿ ವೀಕ್ಷಿಸಿದ ಸ್ಥಳಗಳನ್ನು ಗುರುತಿಸಲು ಸಹಕರಿಸಬೇಕು.
- ಶಿಕ್ಷಕರು ಒಟ್ಟಾಗಿ ಸೇರಿ ತಮ್ಮ ತಂಡದ ವರದಿಯನ್ನು ಸಿದ್ಧಗೊಳಿಸಿ ಪ್ರವಾಸದ ಅಂತ್ಯದಲ್ಲಿ ತಮ್ಮ ಅಧಿಕಾರಿಗಳಿಗೆ ಸಲ್ಲಿಸಬೇಕು.

ಪ್ರವಾಸೋದ್ಯಮ ಇಲಾಖೆಯಿಂದ ನಿಯೋಜಿಸಿರುವ ಪ್ರವಾಸೋದ್ಯಮ ಇಲಾಖೆಯ ಸಮನ್ವಯಾಧಿಕಾರಿಗಳು ಕಾಲಕಾಲಕ್ಕೆ ನೀಡಲಾಗುವ ಸಲಹೆ ಮತ್ತು ಸೂಚನೆಗಳನ್ನು ಪಾಲಿಸಬೇಕು.

**ಶಿಕ್ಷಕರೆ ಹೀಗೆ ಮಾಡದಿರಿ !**

- ಶಿಕ್ಷಕರ ನಡುವೆ ಯಾವುದೇ ಭಿನ್ನಾಭಿಪ್ರಾಯಕ್ಕೆ ಅವಕಾಶ ನೀಡಬಾರದು.
- ಬೆಲೆಬಾಳುವ ವಸ್ತುಗಳನ್ನು ವಿದ್ಯಾರ್ಥಿಗಳಾದಿಯಾಗಿ ಶಿಕ್ಷಕರೂ ಸಹ ಹೊಂದಿರಬಾರದು.
- ಬಸ್ಸಿನಲ್ಲಿ ಎಲ್ಲಾ ಶಿಕ್ಷಕರು ಒಂದೇ ಕಡೆ ಕುಳಿತುಕೊಳ್ಳಬಾರದು.
- ಮಕ್ಕಳಿಗಿಂತ ಮೊದಲು ಸ್ಥಳಗಳನ್ನು ಕಾಯ್ದಿರಿಸಲು ಮುನ್ನುಗ್ಗಬಾರದು.
- ಯಾವುದೇ ಶಿಕ್ಷಕರು ತಾವು ಭೇಟಿ ನೀಡಿದ ಸ್ಥಳಗಳಲ್ಲಿ ತಮ್ಮ ಪರಿಚಯದವರನ್ನು,
- ಸಂಬಂಧಿಗಳನ್ನು ನೋಡುವ ಅಥವಾ ವೈಯಕ್ತಿಕ ಕಾರ್ಯಗಳ ಸಲುವಾಗಿ ತಂಡವನ್ನು ಬಿಟ್ಟು ತೆರಳಬಾರದು.
- ಶಿಕ್ಷಕರು ಧೂಮಪಾನ ಮಾಡುವುದು ಅಥವಾ ಇನ್ನಿತರೆ ದುಶ್ಚಟಗಳಲ್ಲಿ ತೊಡಗಬಾರದು.
- ಈ ಕುರಿತು ಇಲಾಖೆಯ ಗಮನಕ್ಕೆ ಬಂದಲ್ಲಿ ಶಿಸ್ತಿನ ಕ್ರಮ ಜರುಗಿಸಲಾಗುವುದು.
- ಯಾವುದೇ ಹೆಚ್ಚಿನ ಅನಾರೋಗ್ಯದಿಂದ ಪ್ರವಾಸದ ಮಾರ್ಗಮಧ್ಯದಲ್ಲಿ ಬಳಲುತ್ತಿದ್ದಲ್ಲಿ, ಮಗುವನ್ನು ಒಂಟಿಯಾಗಿ ಬಿಡಬಾರದು.

# ಪರಿಷ್ಕೃತ ಸುತ್ತೋಲೆ

**ಸರ್ವ ಶಿಕ್ಷಣ ಅಭಿಯಾನ – ಕರ್ನಾಟಕ**
**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ sಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ.**
ನೃಪತುಂಗ ರಸ್ತೆ. ಬೆಂಗಳೂರು - ೫೬೦೦-೦೧

ಸಂಖ್ಯೆ : ಸಶಿಅ/ಹೆಮಶಿ/ಚಿಕದ/೨೦೦೯-೧೦ ದಿನಾಂಕ :೨೮.೭.೨೦೦೯

**ಪರಿಷ್ಕೃತ ಸುತ್ತೋಲೆ**

**ವಿಷಯ: ೨೦೦೯–೧೦ನೇ ಸಾಲಿನ ಚಿಣ್ಣರ ಜಿಲ್ಲಾ ದರ್ಶನ ಕುರಿತಂತೆ ಮಾರ್ಗಸೂಚಿ.**

ಸರ್ವಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿನ ಮಕ್ಕಳ ವ್ಯಕ್ತಿತ್ವದ ಸರ್ವತೋಮುಖ ಅಭಿವೃದ್ಧಿ, ಒಂದು ಪ್ರಮುಖ ಗುರಿಯಾಗಿದ್ದು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ೭ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾ/ಪ.ವ ಹಾಗೂ ಹೆಣ್ಣು ಮಕ್ಕಳಿಗಾಗಿ 'ಚಿಣ್ಣರ ವ್ಯಕ್ತಿತ್ವ ವಿಕಸನ-ಕರ್ನಾಟಕ ಪರಿಚಯ' ಎಂಬ ಶೈಕ್ಷಣಿಕ ಪ್ರವಾಸವನ್ನು ೨೦೦೪-೦೫ ಹಾಗೂ ೨೦೦೬-೦೭, ೨೦೦೭-೦೮ ಹಾಗೂ ೨೦೦೮-೦೯ನೇ ಸಾಲಿನಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. ೨೦೦೯-೧೦ ನೇ ಸಾಲಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳನ್ನು ಸದರಿ ಚಟುವಟಿಕೆಯ ಫಲಾನುಭವಿಗಳನ್ನಾಗಿಸಲು ಹಾಗೂ ತಮ್ಮ ಜಿಲ್ಲೆಯನ್ನು ಸಮಗ್ರವಾಗಿ

ಅರಿಯುವ ನಿಟ್ಟಿನಲ್ಲಿ ೪ ದಿನದ **"ಚಿಣ್ಣರ ಕರ್ನಾಟಕ ದರ್ಶನದ"** ಬದಲಿಗೆ ೧ ದಿನದ **"ಚಿಣ್ಣರ ಜಿಲ್ಲಾ ದರ್ಶನ"** ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

**ಚಿಣ್ಣರ ಜಿಲ್ಲಾ ದರ್ಶನದ ಸಾಮಾನ್ಯ ಉದ್ದೇಶಗಳು :-**

- ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಪರಿಪೂರ್ಣವಾಗಿ ಜಿಲ್ಲೆಯ ಮುಖ್ಯವಾದ ಸ್ಥಳಗಳು ಅಂದರೆ ಸ್ಥಳೀಯ ವೈಜ್ಞಾನಿಕ, ಧಾರ್ಮಿಕ, ಭೌಗೋಳಿಕ, ನೈಸರ್ಗಿಕ, ಐತಿಹಾಸಿಕ, ವಿಜ್ಞಾನ ಮತ್ತು ಕೈಗಾರಿಕೆಗಳು, ಉತ್ತಮ ಶಾಲೆ, ಆಕಾಶವಾಣಿ ಕೇಂದ್ರ, ಗಣಿಗಳು, ಉದ್ಯಾನವನ, ಮ್ಯೂಸಿಯಂ, ಪ್ರಖ್ಯಾತ ವ್ಯಕ್ತಿಗಳು ಹುಟ್ಟಿದ ಊರು ಇತ್ಯಾದಿಯನ್ನು ಅರಿಯುವುದು.
- ಮಕ್ಕಳು ತಮ್ಮ ಶೈಕ್ಷಣಿಕ ಜೀವನವನ್ನು ರೂಪಿಸಿಕೊಳ್ಳಲು ಸಹಕಾರಿಯಾಗುವಂತೆ ಮಾರ್ಗದರ್ಶನವನ್ನು ನೀಡುವುದು.
- ಮಕ್ಕಳಲ್ಲಿ ಸಹಕಾರ, ಹೊಂದಾಣಿಕೆ, ನಾಯಕತ್ವ ಮನೋಭಾವವನ್ನು ಬೆಳೆಸುವುದು.
- ತಮ್ಮ ಜಿಲ್ಲೆಯ ಸಾಂಸ್ಕೃತಿಕ ಪರಂಪರೆಯ ಅರಿವು ಹಾಗೂ ಅಭಿವೃದ್ಧಿಗೊಳಿಸುವಲ್ಲಿ ಮಕ್ಕಳ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವುದು.
- ತಮ್ಮ ಜಿಲ್ಲೆಯ ಸಾಮಾಜಿಕ ಸ್ಥಿತಿಗತಿಯ ಕುರಿತು ಅರಿವುಂಟು ಮಾಡುವುದು.
- ಮಕ್ಕಳಿಗೆ ನೈಜ ಪರಿಸರದ ದರ್ಶನ ಮಾಡಿಸುವುದು.
- ತರಗತಿ ಕಲಿಕೆಗೆ ಪೂರಕವಾದ ಮಾಹಿತಿ ಒದಗಿಸುವುದು.
- ಶಾಲಾ ಚಟುವಟಿಕೆಗಳನ್ನು, ಹೊರಪ್ರಪಂಚ ಹಾಗೂ ಸಮಾಜದೊಂದಿಗೆ ಸಮನ್ವಯಗೊಳಿಸುವುದು.
- ತಮ್ಮ ಜಿಲ್ಲೆಯ ಐತಿಹಾಸಿಕ ವಿಷಯಗಳ ನೈಜ ಸ್ಥಿತಿಯ ದರ್ಶನ ಮಾಡಿಸುವುದು.
- ಪ್ರಾದೇಶಿಕ ಮಟ್ಟದ ಜನಜೀವನ, ಭಾಷೆ, ಆಚಾರವಿಚಾರಗಳಲ್ಲಿನ ವೈವಿಧ್ಯತೆಯ ಅರಿವುಂಟು ಮಾಡುವುದು.

**ನಿರ್ದಿಷ್ಟ ಉದ್ದೇಶಗಳು :-**

- ಮಕ್ಕಳು ಶಿಕ್ಷಣದಲ್ಲಿ ಆಸಕ್ತಿ ಬೆಳಸಿಕೊಂಡು ಪಠ್ಯೇತರ ಹಾಗೂ ಶೈಕ್ಷಣಿಕ ಚಟುವಟಿಕೆಗಳಲ್ಲಿ ಹೆಚ್ಚು ಉತ್ಸಾಹದಿಂದ ಭಾಗವಹಿಸುವುದು.ಮಕ್ಕಳು ಶಾಲೆಯತ್ತ ಹೆಚ್ಚು ಆಕರ್ಷಿತರಾಗಿ ಶಾಲೆ ಬಿಡುವ ಸಾಧ್ಯತೆಗಳು ಕಡಿಮೆಯಾಗುವುದು.
- ಆರ್ಥಿಕವಾಗಿ ಹಿಂದುಳಿದ ಮಕ್ಕಳು ಹಾಗೂ ಹೆಣ್ಣು ಮಕ್ಕಳು ತಮ್ಮ ಜಿಲ್ಲೆಯ ಅನೇಕ ಸ್ಥಳಗಳ ನೈಜ ಪರಿಸರ ದರ್ಶನ ಪಡೆಯಲು ಸಹಕಾರಿಯಾಗುವುದು.
- ಮಕ್ಕಳ ಕೀಳರಿಮೆ ಹೋಗಲಾಡಿಸುವುದು.
- ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಸುವುದು.
- ಮಕ್ಕಳಲ್ಲಿ ಪಠ್ಯವಸ್ತುವಿನ ಸಾಮರ್ಥ್ಯಗಳ ಬೆಳವಣಿಗೆಗೆ ಸಹಕಾರಿಯಾಗುವುದು.
- ಸೆಮಿಸ್ಟರ್ ಪದ್ಧತಿಯ ಗುಂಪು ಚಟುವಟಿಕೆ ಹಾಗೂ ವೈಯುಕ್ತಿಕ ಚಟುವಟಿಕೆಗಳನ್ನೊಳಗೊಂಡ ಯೋಜನೆಗಳನ್ನು ತಯಾರಿಸಲು ಮಕ್ಕಳಲ್ಲಿ ಮನೋಸ್ಥೈರ್ಯ ಬೆಳೆಸುವುದು.
- ವಿದ್ಯಾರ್ಥಿಗಳಲ್ಲಿ ವೀಕ್ಷಣೆ, ಮೌಖಿಕ ಹಾಗೂ ಲಿಖಿತ ಕೌಶಲ್ಯಗಳ ಸಂವರ್ಧನೆ ಮಾಡುವುದು.
- ನೋಡಿ ಕಲಿಯುವುದರಿಂದ ಅನೇಕ ಪರಿಕಲ್ಪನೆಗಳು ಸ್ಪಷ್ಟವಾಗುವುದು.

ಮಕ್ಕಳಿಗೆ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಮಕ್ಕಳ ದಾಖಲಾತಿ, ಹಾಜರಾತಿ ಉತ್ತಮವಾಗುತ್ತದೆ. ಒಟ್ಟಾರೆ ಗುಣಮಟ್ಟದ ಶಿಕ್ಷಣ ನೀಡುವ ದಿಸೆಯಲ್ಲಿ ಎಲ್ಲಾ ಮಕ್ಕಳಲ್ಲಿ ಉತ್ಸಾಹ ತುಂಬುವುದಾಗಿದೆ. ಯೋಜನೆಯ ಲಾಭವು ನೇರವಾಗಿ ಮಕ್ಕಳಿಗೆ

ತಲುಪುವುದರಿಂದ ಔಚಿತ್ಯಪೂರ್ಣವಾಗಿದ್ದು, ಪೋಷಕರು ಹಾಗೂ ಸಮುದಾಯದ ಸಹಕಾರವನ್ನು ಸಹಗಳಿಸಬಹುದಾಗಿದೆ ಎಂದು ಅಭಿಪ್ರಾಯ ಪಟ್ಟು ಒಮ್ಮತದಿಂದ ಈ ಕಾರ್ಯಕ್ರಮವನ್ನು ಅನುಮೋದಿಸಲಾಗಿದೆ.

೧. **ಯೋಜನೆಯ ಆಯವ್ಯಯ**

೨೦೦೯-೧೦ನೇ ಸಾಲಿನ ಜಿಲ್ಲೆಗಳ ಸರ್ವ ಶಿಕ್ಷಣ ಅಭಿಯಾನದ AWP&B ಯಲ್ಲಿನ 'Innovative Activity for SC/ST' ಚಟುವಟಿಕೆಯಡಿಯಲ್ಲಿ ಪ್ರತಿ ಜಿಲ್ಲೆಗೆ ರೂ.೧೫ಲಕ್ಷಗಳು ಅನುಮೋದನೆಯಾಗಿರುತ್ತದೆ.

ಒಟ್ಟಾರೆ ರಾಜ್ಯಕ್ಕೆ ರೂ. ೪೩೫ ಲಕ್ಷಗಳು. ಇದನ್ನು ವಲಯವಾರು ಮರು ಹೊಂದಾಣಿಕೆ ಮಾಡಲಾಗುತ್ತದೆ. ಪ್ರತಿ ೫೦ ಮಕ್ಕಳು ಹಾಗೂ ೪ ಶಿಕ್ಷಕರನ್ನು ಒಳಗೊಂಡ ತಂಡಕ್ಕೆ ಸೀಮಿತ ಅನುದಾನ : ೨೫,೦೦೦. ವಲಯವಾರು ಕನಿಷ್ಠ ೮ ತಂಡಗಳ ಪ್ರವಾಸ ಹಮ್ಮಿಕೊಳ್ಳುವುದು. ಒಟ್ಟು ೨೦೨ ವಲಯಗಳಿಂದ ೧೬೧೬ ತಂಡಗಳು ಪ್ರವಾಸಕ್ಕೆ ಒಳಪಡುವುವು. ಹಾಗೂ ಹೆಚ್ಚುವರಿಯಾಗಿ ಈ ಕೆಳಕಂಡ ವಲಯಗಳಲ್ಲಿ ಎಸ್.ಸಿ./ಎಸ್.ಟಿ ಮಕ್ಕಳ ದಾಖಲಾತಿ(ಡೈಸ್೨೦೦೮) ಹೆಚ್ಚಿರುವ ಹಿನ್ನೆಲೆಯಲ್ಲಿ ಅಂತಹ ಈ ಕೆಳಗಿನ ಹೆಚ್ಚುವರಿ ಪ್ರತಿ ವಲಯದಿಂದ ३ ತಂಡಗಳಲ್ಲಿ ಪ್ರವಾಸ ಆಯೋಜಿಸುವುದು. ३ ತಂಡಗಳ ಪ್ರವಾಸವನ್ನು ಶೈಕ್ಷಣಿಕ ವಲಯಗಳಾದ ಬಳ್ಳಾರಿ ಪೂರ್ವ, ಬಳ್ಳಾರಿ ಪಶ್ಚಿಮ, ಹೊಸಪೇಟೆ, ಕೂಡ್ಲಗಿ, ಸಂಡೂರು, ಔರಾದ, ಬಸವಕಲ್ಯಾಣ, ಹಮ್ನಾಬಾದ್, ಬಿಜಾಪುರ ಗ್ರಾಮೀಣ, ಸಿಂಧಗಿ, ಚಿಂತಾಮಣಿ, ಗೌರಿಬಿದನೂರು, ಹುಕ್ಕೇರಿ, ಚಳ್ಳಕೆರೆ, ಚಿತ್ರದುರ್ಗ, ಹಿರಿಯೂರು, ಮೊಳಕಾಲ್ಮೂರು, ಚನ್ನಗಿರಿ, ಆಳಂದ, ಚಿತ್ತಾಪುರ, ಕೋಲಾರ, ಗಂಗಾವತಿ, ಕೊಪ್ಪಳ, ಪಾವಗಡ, ಸಿರಾ, ಹೆಚ್.ಡಿ.ಕೋಟೆ, ಮೈಸೂರು ಗ್ರಾಮಾಂತರ, ನಂಜನಗೂಡು, ಟಿ.ಎನ್.ಪುರ, ದೇವದುರ್ಗ, ಲಿಂಗಸುಗೂರು, ಮಾನ್ವಿ, ರಾಯಚೂರು, ಸಿಂಧನೂರು, ತುಮಕೂರು, ಶಹಪೂರ, ಶೋರಾಪುರ ಮತ್ತು ಯಾದಗಿರಿ ಯಲ್ಲಿ ಆಯೋಜಿಸುವುದು.
ಒಟ್ಟಾರೆ ೨೦೦೯-೧೦ನೇ ಸಾಲಿನಲ್ಲಿ ೧೭೩೦ ತಂಡಗಳ ಚಿಣ್ಣರ ಜಿಲ್ಲಾ ದರ್ಶನ ಪ್ರವಾಸ ಅನುಷ್ಠಾನಗೊಳಿಸುವುದು.

**ಘಟಕವೆಚ್ಚದ ವಿವರ:**

- ರೂ. ೨೫,೦೦೦/- ಅನುದಾನದ ಚಟುವಟಿಕೆವಾರು ವಿವರ ಈ ಕೆಳಕಂಡಂತೆ ಇರುತ್ತದೆ.
- ಕೆ.ಎಸ್.ಆರ್.ಟಿ.ಸಿ ಬಸ್ ಟ್ರಾನ್ಸಪೋರ್ಟೇಷನ್ ವೆಚ್ಚ (ಅಂದಾಜು ದೂರ ೬೦೦ ಕಿ.ಮೀ ಗೆ ೨೨ ರೂ.ನಂತೆ ೫೫ ಸೀಟರ್ ಬಸ್, ೨ ದಿನಗಳಿಗೆ - ಅಂದಾಜು ಅನುದಾನ ರೂ. ೧೩,೨೦೦/-
- ಊಟ ೫೫ ಜನರಿಗೆ (೫೦ ಮಕ್ಕಳು ಹಾಗೂ ೪ ಶಿಕ್ಷಕರು+ ಚಾಲಕ) - ೨ ದಿನಗಳಿಗೆ- ಅಂದಾಜು ಅನುದಾನ ರೂ. ೬೦೦೦/-
- ಒಂದು ರಾತ್ರಿಯ ಉಳಿಯುವಿಕೆಗೆ ( ಡಾರ್ಮೆಟ್ರಿ ಗಾಗಿ) ೫೫ ಜನರಿಗೆ - ಅಂದಾಜು ಅನುದಾನ ರೂ. ೧೫೦೦/-
- ವಿವಿಧ ಸ್ಥಳಗಳ ಪ್ರವೇಶ ಶುಲ್ಕ (ವಿನಾಯಿತಿ ಪಡೆಯಲು ಮೊದಲೆ ಅನುಮತಿ ಪಡೆದಿರಬೇಕು), ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ - ಅಂದಾಜು ಅನುದಾನ ರೂ. ೫೦೦/-
  ಬಸ್ ಹಾಲ್ಟಿಂಗ್ ಫೀ - ಅಂದಾಜು ಅನುದಾನ ರೂ. ೧೦೦/-
- ಡ್ರೈವರ್ ಬಾಟ & ಇನ್ಸಷೂರನ್ಸ್- ಅಂದಾಜು ಅನುದಾನ ರೂ. ೬೦೦/-
- ೫೪ ಜನರಿಗೆ (ನೋಟ್ ಬುಕ್, ಕ್ಯಾಪ್ಸ್, ಪೆನ್ಸ್) - ಅಂದಾಜು ಅನುದಾನ ರೂ. ೧೫೦೦/-
- ಚಿಣ್ಣರ ಜಿಲ್ಲಾ ದರ್ಶನ ಕೈಪಿಡಿ ೫೫ ಪುಸ್ತಕಗಳಿಗೆ - ಅಂದಾಜು ಅನುದಾನ ರೂ. ೧೧೦೦/- (ಡಯಟ್ ತಯಾರಿಸಿದಂತಹ ಕೈಪಿಡಿಯ ಮುದ್ರಣವನ್ನು ಉಪನಿರ್ದೇಶಕರು ನಿಯಮಾನುಸಾರ ಮುದ್ರಿಸುವುದು)
- ದಾಖಲೀಕರಣ - ರೂ.೩೦೦/-

- ಔಷಧಿ- ರೂ. ೧೦೦/-
- ಮೇಲಿನ ಘಟಕ ವೆಚ್ಚ ಸಾಂಕೇತಿಕವಾಗಿದ್ದು, ಮರುಹೊಂದಾಣಿಕೆ ಮಾಡಿಕೊಳ್ಳಲು ಅವಕಾಶವಿದೆ.

ಒಟ್ಟು ೫೦ ಮಕ್ಕಳು ಹಾಗೂ ೪ ಶಿಕ್ಷಕರಿಗೆ ೨ ದಿನದ ಪ್ರವಾಸಕ್ಕೆ ಗರಿಷ್ಠ ವೆಚ್ಚ ಮಾಡಬಹುದಾದ ಅನುದಾನ: ೨೫೦೦೦/-. (ಪ್ರತಿ ಮಗುವಿಗೆ ತಗಲುವ ಅಂದಾಜು ವೆಚ್ಚ ರೂ. ೫೦೦/-)

**೨. ಜಿಲ್ಲಾ ಚಿಣ್ಣರ ಕರ್ನಾಟಕ ದರ್ಶನವನ್ನು ಎರಡು ದಿನಗಳು ಆಯೋಜಿಸುವುದು.**

**೩. ಅನುಷ್ಠಾನಕ್ಕೆ ಸಂಬಂಧಿಸಿದ ಅಂಶಗಳು:**

ಜಿಲ್ಲಾ ಹಂತದಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಚಿಣ್ಣರ ಜಿಲ್ಲಾ ದರ್ಶನ ಸಮನ್ವಯ ಸಮಿತಿಯನ್ನು ರಚಿಸುವುದು.(ಜಿಲ್ಲಾ ಉಪನಿರ್ದೇಶಕರು(ಆ) - ಸದಸ್ಯ ಕಾರ್ಯದರ್ಶಿಗಳು, ಡಯಟ್ ಪ್ರಾಂಶುಪಾಲರು- ಉಪಾಧ್ಯಕ್ಷರು, ಜಿಲ್ಲಾ ಉಪಯೋಜನಾ ಸಮನ್ವಯ ಅಧಿಕಾರಿ- ಸ.ಶಿ.ಅ, ಡಯಟ್‌ನ ಸಿ.ಎಂ.ಡಿ.ಇ ವಿಭಾಗದ ಮುಖ್ಯಸ್ಥರು, ಆಯಾ ಜಿಲ್ಲೆಯ ಎಲ್ಲಾ ಶೈಕ್ಷಣಿಕ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಎಲ್ಲಾ ತಾಲ್ಲೂಕಿನ ತಹಸಿಲ್ದಾರ್ ಕೆ.ಎಸ್.ಆರ್.ಟಿ.ಸಿ ಪ್ರತಿನಿಧಿ, ಆರ್.ಟಿ.ಓ ಪ್ರತಿನಿಧಿ, ಪ್ರಾಚ್ಯವಸ್ತು ಇಲಾಖೆಯ ಅಧಿಕಾರಿಗಳು, ಪ್ರತಿ ತಾಲ್ಲೂಕಿನಿಂದ ಒಂದು ಸ್ವಯಂ ಸೇವಕ ಸಂಘದ ಪ್ರತಿನಿಧಿ, ಜಿಲ್ಲಾ ಕೆ.ಎಸ್.ಟಿ.ಡಿ.ಸಿ ಪ್ರತಿನಿಧಿ ಓಳಗೊಂಡಂತೆ ರಚಿಸುವುದು). ಜಿಲ್ಲೆಯ ಎಲ್ಲಾ ವಲಯಗಳ ಜಿಲ್ಲಾ ದರ್ಶನಕ್ಕೆ ಸಂಬಂಧಿಸಿದಂತೆ ತಾಲ್ಲೂಕುವಾರು ಕ್ರಿಯಾ ಯೋಜನೆಯನ್ನು ಅನುಮೋದಿಸುವುದು ಹಾಗೂ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಮನ್ವಯ ಕಾರ್ಯ ನಿರ್ವಹಿಸುವುದು.

ತಾಲ್ಲೂಕು ಹಂತದಲ್ಲಿ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯ ಅಧ್ಯಕ್ಷತೆಯಲ್ಲಿ ಚಿಣ್ಣರ ಜಿಲ್ಲಾ ದರ್ಶನ ಅನುಷ್ಠಾನ ಸಮಿತಿಯನ್ನು ರಚಿಸುವುದು (ಸದಸ್ಯರುಗಳು: ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬಿ.ಆರ್.ಸಿ, ತಾಲ್ಲೂಕು ಪಂಚಾಯಿತಿ ಪ್ರತಿನಿಧಿ, ಕೆ.ಎಸ್.ಆರ್.ಟಿ.ಸಿ ಪ್ರತಿನಿಧಿ, ಪ್ರಾಚ್ಯವಸ್ತು ಇಲಾಖೆಯ ಅಧಿಕಾರಿಗಳು, ಆರ್.ಟಿ.ಓ ಪ್ರತಿನಿಧಿ, ೨ ಸಿ.ಎ.ಈ.ಓ ಓಳಗೊಂಡಂತೆ ರಚಿಸುವುದು). ಹಾಗೂ ಪ್ರತಿ ಶೈಕ್ಷಣಿಕ ವಲಯದಲ್ಲಿ ಪ್ರತಿ ತಂಡ ಪ್ರವಾಸ ಹೊರಡುವಲ್ಲಿ ಮಕ್ಕಳ ಆಯ್ಕೆ, ರೂಟ್ ಮ್ಯಾಪ್ ತಯಾರಿಕೆ, ತಂಡದ ಇನ್ಶೂರೆನ್ಸ್ ಮಾಡಿಸುವುದು, ಊಟ, ವಸತಿ, ಒಟ್ಟಾರೆ ಕ್ರಿಯಾ ಯೋಜನೆ ತಯಾರಿಕೆಯಿಂದ ಹಿಡಿದು ಅನುಷ್ಠಾನದವರೆವಿಗೂ ಈ ಸಮಿತಿ ಕಾರ್ಯ ನಿರ್ವಹಿಸುತ್ತದೆ. ಯಾವುದೇ ಕಾರಣಕ್ಕೂ ವಸತಿಗೆ ಯೋಗ್ಯವಿಲ್ಲದ ಸ್ಥಳಗಳಲ್ಲಿ ಮಕ್ಕಳಿಗೆ ವಸತಿ ವ್ಯವಸ್ಥೆ ಮಾಡುವಂತಿಲ್ಲ.

**೧. ವಿದ್ಯಾರ್ಥಿಗಳನ್ನು ಹಾಗೂ ಮೇಲ್ವಿಚಾರಕರ ಆಯ್ಕೆಗೆ ಮಾನದಂಡಗಳು**

**ವಿದ್ಯಾರ್ಥಿಗಳನ್ನು ಆಯ್ಕೆ**

ಪ್ರತಿ ಬ್ಲಾಕ್‌ಗೆ ೮ ಅಥವಾ ಹೆಚ್ಚಿನ ತಂಡಗಳಂತೆ ಹಾಗೂ ಪ್ರತಿ ತಂಡದಲ್ಲಿ ೫೦ ಮಕ್ಕಳಿರುವಂತೆ ಪ್ರವಾಸ ತಂಡಗಳನ್ನು ರಚಿಸಬೇಕು. ಹಾಗಾಗಿ ಪ್ರತಿ ಬ್ಲಾಕ್ ನಿಂದ ಕನಿಷ್ಠ ೪೦೦ ಮಕ್ಕಳಿಗೆ ಪ್ರವಾಸ ಹಮ್ಮಿಕೊಳ್ಳುವುದು. ಇನ್ನೂ ಹೆಚ್ಚಿನ ತಂಡಗಳನ್ನು ಸಹ ಆಯೋಜಿಸಬಹುದಾಗಿದೆ. (ಹೆಚ್ಚುವರಿಯಾಗಿ ಆಯ್ಕೆಯಾಗಿರುವ ೩೮ ಬ್ಲಾಕ್‌ಗಳಲ್ಲಿ ಹೆಚ್ಚುವರಿ ಕನಿಷ್ಠ ೩ ತಂಡಗಳು -೧೫೦ ವಿದ್ಯಾರ್ಥಿಗಳು, ಅಂದರೆ ಈ ಬ್ಲಾಕ್ ನಲ್ಲಿ ಒಟ್ಟಾರೆಯಾಗಿ ಕನಿಷ್ಠ ೧೧ ಅಥವಾ ಹೆಚ್ಚಿನ ತಂಡಗಳಂತೆ ಹಾಗೂ ಕನಿಷ್ಠ ೫೫೦ ಮಕ್ಕಳು ಒಳಗೊಂಡಂತೆ ಪ್ರವಾಸ ಹಮ್ಮಿಕೊಳ್ಳುವುದು).

***ವಿಶೇಷ ಸೂಚನೆ: ಖಂಡಿಕೆ ೧ (ಯೋಜನೆಯ ಆಯವ್ಯಯ) ರ ಘಟಕ ವೆಚ್ಚ (೫೦ ಮಕ್ಕಳ ಒಂದು ತಂಡಕ್ಕೆ ರೂ. ೨೫,೦೦೦) ದಲ್ಲಿ ಉಳಿಕೆ ಆದಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳಿಗೆ ಪ್ರವಾಸ ಹಮ್ಮಿಕೊಳ್ಳುವುದು.***

- ೫, ೬ ಮತ್ತು ೭ನೇ ತರಗತಿಯ ಮಕ್ಕಳನ್ನು ಸದರಿ ಕಾರ್ಯಕ್ರಮಕ್ಕೆ ಆಯ್ಕೆ ಮಾಡುವುದು.
- ಆಯಾ ಶೈಕ್ಷಣಿಕ ವಲಯ ದ ೫, ೬ ಮತ್ತು ೭ನೇ ತರಗತಿಯಲ್ಲಿ ಎಲ್ಲ ಮಕ್ಕಳ ಒಟ್ಟು ಸಂಖ್ಯೆಯಲ್ಲಿ ೭೫% ಎಸ್.ಸಿ./ಎಸ್.ಟಿ ಹಾಗೂ ೨೫% ಪ್ರತಿಭಾನ್ವಿತ ಮಕ್ಕಳನ್ನು ಜಿಲ್ಲಾ ಚಿಣ್ಣರ ದರ್ಶನಕ್ಕೆ ಆಯ್ಕೆ ಮಾಡುವುದು. ಶೇಕಡಕ್ಕೆ ಅನುಗುಣವಾಗಿ ಪೂರ್ಣ ಪ್ರಮಾಣದಲ್ಲಿ ಹೆಣ್ಣು ಮಕ್ಕಳನ್ನು ಸದರಿ ಕಾರ್ಯಕ್ರಮಕ್ಕೆ ಒಳಪಡಿಸುವುದು.
- ಯಾವುದೇ ಸಾಂಕ್ರಾಮಿಕ ಕಾಯಿಲೆಗಳಿಂದ ಹಾಗೂ ದೀರ್ಘಕಾಲಿಕ ಕಾಯಿಲೆಗಳಿಂದ ನರಳುತ್ತಿರುವವರನ್ನು ಕರೆತರಬಾರದು.
- ಆರೋಗ್ಯಕರವಾಗಿರುವ ಮಕ್ಕಳನ್ನು ಆಯ್ಕೆಮಾಡುವುದು.
- ತಂದೆ ತಾಯಿಗಳಿಂದ ಒಪ್ಪಿಗೆ ಪತ್ರ ಪಡೆಯುವುದು.
- ಜಿಲ್ಲಾ ದರ್ಶನಕ್ಕೆ, ಮಕ್ಕಳನ್ನು ಆಯ್ಕೆ ಮಾಡುವಲ್ಲಿ ಪ್ರತಿ ತಾಲ್ಲೂಕಿನಿಂದ ಆಯ್ಕೆ ಮಾಡಲು ತಾಲ್ಲೂಕು ಸಮಿತಿಯನ್ನು ಬಿ.ಇ.ಓ, ಬಿ.ಆರ್.ಸಿ, ತಾಲ್ಲೂಕು ಪಂಚಾಯತ್‌ನ ಒಬ್ಬರು ಸದಸ್ಯರು ಹಾಗೂ ಒಂದು ಸ್ವಯಂಸೇವಕ ಸಂಘದ ಪ್ರತಿನಿಧಿಯನ್ನು ಒಳಗೊಂಡಂತೆ ರಚಿಸಿ ಮೇಲಿನ ಮಾನದಂಡದಂತೆ ಆಯ್ಕೆ ಮಾಡುವುದು.

**ಶಿಕ್ಷಕರನ್ನು ಆಯ್ಕೆ ಮಾಡಲು ನಿಗದಿಪಡಿಸಿರುವ ಮಾನದಂಡಗಳು**

- ತಂಡದಲ್ಲಿ ಕಡ್ಡಾಯವಾಗಿ ಇಬ್ಬರು ಪುರುಷ ಶಿಕ್ಷಕರು ಹಾಗೂ ಇಬ್ಬರು ಮಹಿಳಾ ಶಿಕ್ಷಕರಿರಬೇಕು.
- ಈ ಪೈಕಿ ಒಬ್ಬರು ಸ್ಕೌಟ್ಸ್ & ಗೈಡ್ಸ್ ತರಬೇತಿ ಹೊಂದಿದ ಶಿಕ್ಷಕರಾಗಿರಬೇಕು.
- ಒಬ್ಬರು ವಿಜ್ಞಾನ ಹಾಗೂ ಒಬ್ಬರು ಕಲಾ ಶಿಕ್ಷಕರಾಗಿರಬೇಕು.
- ಪ್ರಥಮ ಚಿಕಿತ್ಸೆ ಜ್ಞಾನವನ್ನು ಹೊಂದಿರಬೇಕು.
- ಆರೋಗ್ಯವಂತ ಕ್ರಿಯಾಶೀಲ ಉತ್ಸಾಹಿ ಶಿಕ್ಷಕರಾಗಿರಬೇಕು.
- ೫೦ ವರ್ಷಕ್ಕಿಂತ ಕಡಿಮೆ ವಯೋಮಾನದವರಾಗಿರಬೇಕು.
- ಪ್ರವಾಸ ಹೋಗುವ ಸ್ಥಳದ ಪರಿಚಯವನ್ನು ಮನಗಂಡಿರಬೇಕು.
- ಪ್ರತಿ ತಂಡಕ್ಕೂ ಬೇರೆ ಬೇರೆ ಶಿಕ್ಷಕರನ್ನು ಆಯ್ಕೆ ಮಾಡಬೇಕು.

**ಮುದ್ರಣಕ್ಕೆ ಸೂಚನೆ:**

ಕವರ್ ಪೇಜ್ ಮುಂಭಾಗ - ಮೇಲೆ ಸಣ್ಣ ಫಾಂಟ್‌ನಲ್ಲಿ ಚಿಣ್ಣರ ಕರ್ನಾಟಕ ದರ್ಶನ ಮಾಲಿಕೆ …….(ನಿಮ್ಮ ಜಿಲ್ಲೆಯ ಕೋಡ್ ನಮೂದಿಸುವುದು) ಪಟ್ಟಿ ಲಗತ್ತಿಸಿದೆ. ಮಧ್ಯದಲ್ಲಿ ಚಿಣ್ಣರ ಜಿಲ್ಲಾ ದರ್ಶನ ……………… (ನಿಮ್ಮ ಜಿಲ್ಲೆ ಹೆಸರು ನಮೂದಿಸುವುದು)

ಕವರ್ ಪೇಜ್ ಹಿಂಭಾಗ - ಜಿಲ್ಲೆಯ ಪ್ರಮುಖ ಸ್ಥಳಗಳ ಚಿತ್ರ/ಟಿಪ್ಪಣಿ

ಪುಟ II – ಕವರ್ ಪೇಜ್ ಮುಂಭಾಗದಲ್ಲಿ ಇರುವಂತೆ.

ಪುಟ III – ಕರ್ನಾಟಕದ ನಕ್ಷೆ ಚಿಕ್ಕದಾಗಿ ಹಾಕಿ ಆಯಾ ಜಿಲ್ಲೆಯ ನಕ್ಷೆ ದೊಡ್ಡದಾಗಿ ಹಾಕುವುದು.

ಪುಟ III/Iv – ಮುನ್ನುಡಿ(ಸಿಇಓ, ಡಿಡಿಪಿಐ ಹಾಗೂ ಡಯಟ್ ಪ್ರಾಂಶುಪಾಲರ ಸಹಿಯೊಂದಿಗೆ)

ಪುಟ v – ಜಿಲ್ಲೆಯ ವಿಳಾಸ ದೂರವಾಣಿ ಸಂಖ್ಯೆಯೊಂದಿಗೆ

ಪುಟ vI /vII – ಪ್ರವಾಸದ ಪ್ರಾಮುಖ್ಯತೆ, ಆಯ್ಕೆ ಮನದಂಡ ಇತ್ಯಾದಿ(೦೨ ಪುಟಗಳು)

ಪುಟ vIII – ಜಿಲ್ಲೆಯ ಇತಿಹಾಸ

ಗರಿಷ್ಠ ೬೮ ಪುಟಗಳು

**ಸ್ಪೆಸಿಫಿಕೇಶನ್:**

ಅಳತೆ – ೧/೮ ಡೆಮ್ಮಿ(ಬಿ/ಬಿ)

ಕವರ್ ಪೇಜ್ – ೨೨೦ ಜಿ.ಎಸ್.ಎಂ. ಪಾರಿನ್ ಆರ್ಟ್ ಪೇಪರ್

ಬಣ್ಣ – ಎಲ್ಲಾ ಪುಟಗಳು ಬಹು ವರ್ಣ

ಒಳ ಪುಟಗಳು – ೮೦ ಜಿ.ಎಸ್.ಎಂ. - ಮ್ಯಾಪ್ಲಿಥೋ

ಒಟ್ಟು ಪ್ರತಿಗಳು – ಪ್ರವಾಸ ಹೋಗುವ ಮಕ್ಕಳಿಗೆ ಒಂದೊಂದು ಪ್ರತಿ + ಡಿಡಿಪಿಐ/ಡಿವೈಪಿಸಿ/ಡಯಟ್/ಬಿಇಓ/ ಬಿ.ಆರ್.ಸಿ.(ತಲಾ ೦೩ ಪ್ರತಿ) + ಸಿಎಇಓ (ತಲಾ ೦೧ ಪ್ರತಿ) + ಹೆಚ್ಚುವರಿ(೧%)

ಬೈಂಡಿಂಗ್ – ಸೆಂಟ್ರಲ್ ಪಿನ್ನಿಂಗ್ ಮತ್ತು ಎರಡೂ ಕಡೆ ಪಿನ್.

ಮುದ್ರಣ ಜವಾಬ್ದಾರಿ ಕಂದಾಯ ಜಿಲ್ಲೆಯ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳದ್ದಾಗಿರುತ್ತದೆ. ಶೈಕ್ಷಣಿಕ ಜಿಲ್ಲೆಗಳಾಗಿ ಮಾರ್ಪಟ್ಟಿರುವ ಜಿಲ್ಲೆಗಳಾದ ರಾಮನಗರ-ಬೆಂಗಳೂರು ಗ್ರಾಮಾಂತರ ಕ್ಕೆ ಸಂಬಂಧಿಸಿದಂತೆ ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ-ಬೆಂಗಳೂರು ಉತ್ತರಕ್ಕೆ ಸಂಬಂಧಿಸಿದಂತೆ ಬೆಂಗಳೂರು ಉತ್ತರ, ಚಿಕ್ಕೋಡಿ-ಬೆಳಗಾಂ ಗೆ ಸಂಬಂಧಿಸಿದಂತೆ ಬೆಳಗಾಂ, ಗುಲ್ಬರ್ಗ-ಯಾದಗಿರಿಗೆ ಸಂಬಂಧಿಸಿದಂತೆ ಗುಲ್ಬರ್ಗ, ತುಮಕೂರು-ಮಧುಗಿರಿಗೆ ಸಂಬಂಧಿಸಿದಂತೆ ತುಮಕೂರು ಜಿಲ್ಲೆಗಳು ಮುದ್ರಿಸುವುದು. ಇದಕ್ಕೆ ಸಂಬಂಧಿಸಿದಂತೆ ಮುದ್ರಣ ಘಟಕವೆಚ್ಚವನ್ನು ಮೇಲೆ ಸೂಚಿಸಿದ ಜಿಲ್ಲೆಗಳು ಭರಿಸುವುದು.

ವಿಶೇಷ ಸೂಚನೆ: ಮಕ್ಕಳ ಅನುಪಾತಕ್ಕೆ ಸಂಬಂಧಿಸಿದಂತೆ ಕೈಪಿಡಿಯನ್ನು ಮುದ್ರಿಸಿ ಪ್ರವಾಸಕ್ಕೆ ಹೊರಡುವ ಮಕ್ಕಳಿಗೆ ಕಡ್ಡಾಯವಾಗಿ ಪ್ರವಾಸದ ದಿನ ನೀಡುವುದು. ಹೆಚ್ಚುವರಿಯಾಗಿ ಕೈಪಿಡಿಯ ೧೦೦ ಪ್ರತಿಗಳನ್ನು ಸ.ಶಿ.ಅ ರಾಜ್ಯಕಛೇರಿಗೆ ಹಾಗೂ ೨೫ ಪ್ರತಿಗಳನ್ನು (ಡಯಟ್ ಮತ್ತು ಬಿ.ಆರ್.ಸಿ ಕೇಂದ್ರಗಳಿಗೆ) ನೀಡಲು ಮುದ್ರಿಸಿ ತಲುಪಿಸುವುದು.

**೬. ಚಿಣ್ಣರ ಜಿಲ್ಲಾ ದರ್ಶನದ ವೇಳಾಪಟ್ಟಿ:**

೧. ಮುದ್ರಣ ಕಾರ್ಯ ಅಂತಿಮಗೊಳಿಸುವ ದಿನಾಂಕ : ೨೦-೦೮-೨೦೦೯.

೨. ಚಿಣ್ಣರ ಜಿಲ್ಲಾ ದರ್ಶನ ಪ್ರವಾಸ ಆರಂಭ- ೧೫-೦೯-೨೦೦೯

೩. ಚಿಣ್ಣರ ಜಿಲ್ಲಾ ದರ್ಶನ ಪ್ರವಾಸ ಮುಕ್ತಾಯ- ೩೧-೧೨-೨೦೦೯.

೪. ವಲಯವಾರು ದಾಖಲೀಕರಣ ಮಾಡಿ ಪ್ರತಿಯನ್ನು ಜಿಲ್ಲಾ ಸ.ಶಿ.ಅ ಕಛೇರಿಗೆ ಒದಗಿಸುವ ದಿನಾಂಕ- ೧೦-೦೧-೨೦೧೦.

೫. ಜಿಲ್ಲಾ ಕಛೇರಿಯಿಂದ ಕ್ರೋಢೀಕರಣ ವರದಿ, ವೆಚ್ಚದ ವಿವರ, ಪ್ರವಾಸಕ್ಕೆ ಹೊರಟ ಮಕ್ಕಳ ವಿವರ ( ವರ್ಗವಾರು ಕೋಢೀಕರಣ ನೀಡುವುದು) ಹಾಗೂ ದಾಖಲೀಕರಣದ ಪ್ರತಿ ಸಲ್ಲಿಸುವ ದಿನಾಂಕ: ૩೧-೧-೨೦೧೦.

**೭. ಜಿಲ್ಲಾವಾರು ಪ್ರವಾಸದ ಅನುದಾನದ ವಿವರ ಲಗತ್ತಿಸಿದೆ: ಅದರಂತೆ ಜಿಲ್ಲೆಗಳಿಗೆ ರಾಜ್ಯ ಕಛೇರಿಯಿಂದ ಬಿಡುಗಡೆ ಮಾಡಲಾಗುವುದು.**

**ರಾಜ್ಯ ಯೋಜನಾ ನಿರ್ದೇಶಕರು**
**ಸರ್ವ ಶಿಕ್ಷಣ ಅಭಿಯಾನ**

**ಪ್ರತಿಗಳು ಕ್ರಮಕ್ಕಾಗಿ:**

೧. ರಾಜ್ಯದ ಎಲ್ಲಾ ಜಿಲ್ಲೆಯ ಉಪನಿರ್ದೇಶಕರು ( ಆಡಳಿತ) ಮತ್ತು ಉಪನಿರ್ದೇಶಕರು ( ಅಭಿವೃದ್ಧಿ).
೨. ರಾಜ್ಯದ ಎಲ್ಲಾ ಜಿಲ್ಲೆಯ ಜಿಲ್ಲಾ ಉಪಯೋಜನಾ ಸಮನ್ವಯ ಅಧಿಕಾರಿಗಳು, ಸ.ಶಿ.ಅ.
೩. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣ ಅಧಿಕಾರಿಗಳು.

**ಪ್ರತಿಗಳು ಮಾಹಿತಿಗಾಗಿ:**

೧. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ, ಬಹುಮಹಡಿಯ ಕಟ್ಟಡ, ಬೆಂಗಳೂರು.
೨. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು
೩. ಅಪರ ಆಯುಕ್ತರು, ಗುಲ್ಬರ್ಗಾ ಹಾಗೂ ಧಾರವಾಡ ಆಯುಕ್ತಾಲಯ.
೪. ರಾಜ್ಯ ಯೋಜನಾ ನಿರ್ದೇಶಕರ ಆಪ್ತ ಶಾಖೆಗೆ ಮಾಹಿತಿಗಾಗಿ.
೫. ಈ ಕಚೇರಿಯ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿಗಾಗಿ.

# ಚಾಮರಾಜನಗರ ಜಿಲ್ಲೆಯ ಪರಿಚಯ

ಕರ್ನಾಟಕದ ದಕ್ಷಿಣ ತುತ್ತತುದಿಯಲ್ಲಿರುವ ಚಾಮರಾಜನಗರ ಜಿಲ್ಲೆ ಭೂಪಟದಲ್ಲಿ ಬಾಹುಬಲಿಯ ಬಲಭಾಗದ ಪಾದುಕೆಯಂತೆ ಕಂಗೊಳಿಸುವುದನ್ನು ಕಾಣಬಹುದು. ದಕ್ಷಿಣ ಒಳನಾಡಿನ ಎಲೆ ಉದುರುವ, ಮಳೆಗಾಲದಲ್ಲಿ ಸದಾ ಹಸಿರಾಗಿರುವ ಅರಣ್ಯ ಸಾಲನ್ನು ಹೊಂದಿದೆ. ತಮಿಳುನಾಡು ಮತ್ತು ಕೇರಳಗಡಿಗುಂಟ ಹಂಚಿಕೊಂಡಿರುವ ಈ ಜಿಲ್ಲೆ ೧೧.೩೫ ಉತ್ತರ ಅಕ್ಷಾಂಶದಿಂದ ೧೨.೧೮ ಉತ್ತರ ಅಕ್ಷಾಂಶದವರೆವಿಗೂ, ೭೬.೨೪ ಪೂರ್ವ ರೇಖಾಂಶದಿಂದ ೭೭.೪೬ ಪೂರ್ವ ರೇಖಾಂಶದ ನಡುವೆ ೫೬೮೫ ಚ.ಕಿ.ಮೀ. ವಿಸ್ತೀರ್ಣದಲ್ಲಿ ಹರಡಿಕೊಂಡಿದೆ. ಪೂರ್ವ ಮತ್ತು ಪಶ್ಚಿಮ ಘಟ್ಟ ಸಂದಿಸುವ ನೀಲಗಿರಿ ಅರಣ್ಯ ವ್ಯಾಪ್ತಿಯಲ್ಲಿ ಬಿಳಿಗಿರಿರಂಗನ ಬೆಟ್ಟ ವನ್ಯಧಾಮ ಮತ್ತು ಬಂಡೀಪುರ ರಾಷ್ಟ್ರೀಯ ಹುಲಿ ಅಭಯಾರಣ್ಯ ೧೪೧೩ ಚ.ಕಿ.ಮೀ. ವಿಸ್ತೀರ್ಣದಲ್ಲಿ ಹಬ್ಬಿದೆ. ಜಿಲ್ಲೆಯ ಎತ್ತರದ ಕತ್ತರಿಬೆಟ್ಟ ೧೮೧೬ ಮೀ, ಬಿಳಿಗಿರಿರಂಗನ ಬೆಟ್ಟ ೧೧೫೧ ಎಂ, ಬೇಡಗುಳಿ ಎಸ್ಟೇಟು ೧೪೦೦ ಮೀ ಗಳಾಗಿದ್ದು ಆನೆ, ಹುಲಿ, ಚಿರತೆ, ಕಾಡುಕೋಣ, ಸೀಳುನಾಯಿ, ಜಿಂಕೆ, ಕರಡಿ, ಸಾರಂಗ, ಸಿಂಗಳೀಕ, ನವಿಲು, ಅಪರೂಪದ ಕೀಟ ಪ್ರಭೇದವನ್ನು ಒಳಗೊಂಡಿದೆ. ಕೀಟಭಕ್ಷಕ ಸಸ್ಯವರ್ಗ ಒಳಗೊಂಡಂತೆ ಶ್ರೀಗಂಧ, ಬೀಟೆ, ಹೊನ್ನೆ, ನೀಲಗಿರಿ ಮತ್ತು ಸಿಂಕೋನ ವೃಕ್ಷಗಳ ಜೀವ-ವೈವಿದ್ಯತಾ ಆವಾಸಗಳ ನಡುವೆ ಕಾಣಬರುತ್ತದೆ.

ಕ್ರಿಸ್ತಪೂರ್ವದಿಂದಲೂ ಆದಿ ಮಾನವನ ನೆಲೆಯಾಗಿದ್ದ ಶಿಲಾ ಸಮಾಧಿಗಳನ್ನು ಬುಡಕಟ್ಟು ಜನಾಂಗ ಸೋಲಿಗರು ವಾಸಿಸುವುದನ್ನು ಬಿಳಿಗಿರಿರಂಗನ ಬೆಟ್ಟದ ಪೋಡುಗಳಲ್ಲಿ ಕಾಣಬಹುದಾಗಿದೆ. ಈ ಭಾಗದ ಜೀವನದಿಗಳಾದ ಸುವರ್ಣವತಿ ಚಿಕ್ಕಹೊಳೆ ಕಬಿನಿ, ಗುಂಡ್ಲು ನದಿಗಳು ಜಿಲ್ಲೆಯಲ್ಲಿ ಹರಿಯುವ ಕಾವೇರಿ ನದಿಯ ಉಪನದಿಗಳಾಗಿವೆ. ಇವುಗಳಿಗೆ ಅಲ್ಲಲ್ಲಿ ಅಣೆಕಟ್ಟೆ ನಿರ್ಮಿಸಲಾಗಿದೆ. ಜೀವನದಿ ಕಾವೇರಿ ೧೧೦ ಕಿ.ಮೀ. ದೂರವನ್ನು ಕ್ರಮಿಸಿ, ಗಗನಚುಕ್ಕಿ, ಭರಚುಕ್ಕಿ ಜಲಪಾತ ಸೃಷ್ಟಿಸಿ ೧೯೦೨ ರಲ್ಲಿ ಏಷ್ಯಾದ ಮೊದಲ ಜಲವಿದ್ಯುತ್ ತಯಾರಿಕೆ ನೆಲೆಯಾಗಿದ್ದು ಇದೇ ಜಿಲ್ಲೆಯಲ್ಲಿ. ಮುಂದೆ ಮಹದೇಶ್ವರ ಬೆಟ್ಟದಿಂದ ೫೦ ಕಿ.ಮೀ ಅಂತರದಲ್ಲಿರುವ ಹೊಗೇನಕಲ್ ಜಲಪಾತ ನೈಸರ್ಗಿಕ ಶಿಲೆಗಳನ್ನು ಸೃಷ್ಟಿಸಿದೆ. ರಾಜ್ಯ, ರಾಷ್ಟ್ರ, ವಿದೇಶಿಯರ ಆಕರ್ಷಣೀಯ ನೈಸರ್ಗಿಕ ಜಲಪಾತಗಳು ಇಲ್ಲಿನ ವೈಶಿಷ್ಟ್ಯ ಗಂಗರು, ಹೊಯ್ಸಳರು, ವಿಜಯನಗರ, ಮೈಸೂರರಸರ ಕಲಾವೈಭವವನ್ನು ಚಾಮರಾಜನಗರದ ಬಳಿ ಇರುವ ನರಸಮಂಗಲ, ಹರದನಹಳ್ಳಿ,

ಶಿಲಾಶಾಸನ, ಗುಂಡ್ಲುಪೇಟೆ ತಾಲೋಕಿನಲ್ಲಿ ಕಂಡುಬರುವ ವರಹಾವಾಸುದೇವ ಮಂದಿರ, ಹುಲುಗನ ಮೊರಡಿ, ಹಿಮವದ್ ಗೋಪಾಲಸ್ವಾಮಿ ಬೆಟ್ಟ, ಯಳಂದೂರಿನ ಬಳೇಮಂಟಪ, ಜಹಾಗಿರ್‌ದಾರ್ ಬಂಗಲೆ, ಕೊಳ್ಳೆಗಾಲದ ಬಳಿಯ ಮಧ್ಯರಂಗ ಇಲ್ಲಿನ ಐತಿಹಾಸಿಕ ಕುರುಹುಗಳಾಗಿವೆ.

ತಮಿಳು, ಮಲೆಯಾಳಂ, ತೆಲುಗು ಉರ್ದು ಽ◌ಂµಇU◌ಂಳ ಪ್ರಭಾವವಿದ್ದು ಬಹುಸಂಖ್ಯಾತರು ಕನ್ನಡಿಗರಾಗಿದ್ದಾರೆ. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಧರ್ಮಗಳ ಸಮನ್ವಯವನ್ನು ಕಾಣಬಹುದು. ಪ್ರಪಂಚದಲ್ಲಿಯೆ ವಿಶಿಷ್ಟವೆನಿಸಿದ ಕಪ್ಪುಕಲೆ (ಗ್ರ್ಯಾನೈಟ್) ಇಲ್ಲಿ ಕಂಡು ಬರುತ್ತದೆ. ಜತೆಗೆ ಸುಣ್ಣದ ಕಲ್ಲಿನ ನಿಕ್ಷೇಪವು ಹೇರಳವಾಗಿದೆ.

ಶೇ ೪೮ ದಟ್ಟಾರಣ್ಯದಿಂದ ಸುತ್ತುವರಿದಿರುವ ಈ ಜಿಲ್ಲೆ ರಾಜ್ಯದಲ್ಲಿ ೨೫ನೇ ಸ್ಥಾನದಲ್ಲಿದೆ. ೨೦೦ ಯಿಂದ ೩೫೦ ಉಷ್ಣಾಂಶವನ್ನು ಹೊಂದಿದ್ದು ೭೦ ರಿಂದ ೧೦೦ ಸೆಂ.ಮೀ. ಮಳೆಯನ್ನು ಪಡೆಯುತ್ತದೆ. ಕೃಷಿಯ ಬಹುಭಾಗ ಮಳೆ ಆಶ್ರಯದ ಜತೆಗೆ ಕೊಳವೆ ಬಾವಿ, ತೆರೆದ ಬಾವಿ, ಕಬಿನಿ ನಾಲೆಗಳು ಕೃಷಿಕಾರ್ಯಗಳಿಗೆ ನೀರನ್ನು ಒದಗಿಸುತ್ತವೆ. ರೈತರು ಕಬ್ಬು, ಭತ್ತ, ರಾಗಿ, ಬಾಳೆ, ಕಡ್ಲೆಕಾಯಿ, ತೆಂಗು ಮತ್ತು ಅಡಿಕೆ ಬೆಳೆಗಳ ಜತೆಗೆ ಹಣ್ಣು, ತರಕಾರಿಗಳನ್ನು ಬೆಳೆಯುತ್ತಾರೆ.

೨೦೦೧ರ ಜನಗಣತಿಯ ಪ್ರಕಾರ ೯,೬೪,೨೭೫ ಜನಸಂಖ್ಯೆ ಹೊಂದಿದ್ದು ಪ್ರತಿ ಚ.ಕಿ.ಮೀ. ಪ್ರದೇಶದಲ್ಲಿ ೧೮೯ ಜನರು ವಾಸಿಸುತ್ತಿದ್ದಾರೆ. ೫೧.೨೬% ಸಾಕ್ಷರ ಪ್ರಮಾಣವಿದ್ದು ಲಿಂಗಾನುಪಾತ ೯೬೮ ಆಗಿದೆ. ೧೯೯೭ರಲ್ಲಿ ಜಿಲ್ಲಾ ಸ್ಥಾನ ಪಡೆದ ನಂತರ ೪ ತಾಲೋಕುಗಳನ್ನು ಹೊಂದಿದ್ದು ೧೫,೮೧೮ ತಲಾಧಾಯ ಇದೆ.

ಮಲೆಮಹಾದೇಶ್ವರ ರಾಚಪ್ಪಾಜಿ, ಸಿದ್ಧಪ್ಪಾಜಿ, ಮಂಟೇಸ್ವಾಮಿಗಳ ಪಾದ ಸ್ಪರ್ಶದಿಂದ ಧಾರ್ಮಿಕವಾಗಿ ಮಹದೇಶ್ವರ ಬೆಟ್ಟ, ಚಿಕ್ಕಲೂರು, ಬಿಳಿಗಿರಿ ಬೆಟ್ಟದ ಜಾತ್ರೆ, ಶಿಂಷಾದ ಬಳಿಯ ದರ್ಗಾಗಳು ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ವಿಭಿನ್ನ ಜನಪದ ಕಾವ್ಯಗಳಿಗೆ ಸ್ಫೂರ್ತಿಯಾಗಿವೆ. ಗೊರವರ ಕುಣಿತ, ಕಂಸಾಳೆ, ವೀರಗಾಸೆ, ಧಾರ್ಮಿಕ ಹಿನ್ನೆಲೆಯಲ್ಲಿ ರೂಪತಳೆದಿವೆ.

ಮುರಾರ್ಜಿ, ವಸತಿ ಶಾಲೆಗಳ ಜತೆಗೆ ನವೋದಯ ಕೇಂದ್ರೀಯ ವಿದ್ಯಾಲಯದ ಮತ್ತು ವೃತ್ತಿ ಕಾಲೇಜುಗಳಾದ ಎಂಜಿನಿಯರ್, ಪಾಲಿಟೆಕ್ನಿಕ್, (ಡಿ.ಎಡ್) ಬಿ.ಎಡ್., ಪದವಿ., ಕಾಲೇಜುಗಳು ಸರ್ಕಾರಿ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿತವಾಗಿವೆ. ರಾಷ್ಟ್ರೀಯ ಹೆದ್ದಾರಿ ೨೦೯ ಮತ್ತು ೨೧೨ ಇಲ್ಲಿ ಹಾದು ಹೋಗಿರುವುದರ ಜತೆಗೆ ಬ್ರಾಡ್‌ಗೇಜ್ ರೈಲು ಮಾರ್ಗ ಕರ್ನಾಟಕದ ದಕ್ಷಿಣ ತುದಿಯ ಈ ಜಿಲ್ಲೆಯನ್ನು ಸಂಪರ್ಕಿಸುತ್ತದೆ.

ಚಾಮರಾಜನಗರ ಉತ್ತರ ಭಾಗದಲ್ಲಿ ಮೈಸೂರು, ಮಂಡ್ಯ, ರಾಮನಗರ ಜಿಲ್ಲೆಗಳಿದ್ದು ದಕ್ಷಿಣದಲ್ಲಿ ತಮಿಳುನಾಡು ಮತ್ತು ಕೇರಳ ರಾಜ್ಯಗಳು ಜಿಲ್ಲೆಯ ಗಡಿಯನ್ನು ಹಂಚಿಕೊಂಡಿವೆ. ಪೂರ್ವ ಪಶ್ಚಿಮಭಾಗಗಳು ಬಹುತೇಕ ಅರಣ್ಯಗಳಿಂದ ಕೂಡಿವೆ. ರಾಜ್ಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಗುರ್ತಿಸಿಕೊಂಡಿರುವ ಹಲವಾರು ಕವಿ, ಕಲಾವಿದರ ಜತೆಗೆ ನಟ ಡಾ. ರಾಜಕುಮಾರರಂತವರನ್ನು ನೀಡಿರುವ ಈ ಜಿಲ್ಲೆ ಸಾಂಸ್ಕೃತಿಕವಾಗಿ ಶ್ರೀಮಂತ ಜಿಲ್ಲೆಯಾಗಿದೆ.

# ಚಾಮರಾಜನಗರ ತಾಲ್ಲೂಕು ಪರಿಚಯ

ಚಾಮರಾಜನಗರವು ಜಿಲ್ಲಾ ಕೇಂದ್ರವೂ ಹಾಗೂ ತಾಲೂಕು ಕೇಂದ್ರವೂ ಆಗಿದೆ. ಚಾಮರಾಜನಗರ ತಾಲೂಕಿನ ಪಶ್ಚಿಮ ಮತ್ತು ದಕ್ಷಿಣ ಪ್ರದೇಶವು ಎತ್ತರವಾಗಿದ್ದು ಮಧ್ಯ ಮತ್ತು ಉತ್ತರ ಭಾಗವು ತಗ್ಗಾಗಿದೆ. ಪೂರ್ವದಲ್ಲಿ ಬಿಳಿಗಿರಿರಂಗನ ಬೆಟ್ಟವನ್ನು ದಕ್ಷಿಣದಲ್ಲಿ ತಮಿಳುನಾಡು, ಪಶ್ಚಿಮದಲ್ಲಿ ಗುಂಡ್ಲುಪೇಟೆ ಮತ್ತು ನಂಜನಗೂಡು ತಾಲೂಕು ಉತ್ತರದಲ್ಲಿ ನರಸೀಪುರ ಮತ್ತು ಯಳಂದೂರು ತಾಲೂಕಿನ ಮಧ್ಯದಲ್ಲಿದೆ.

೧೮೧೮ರವರೆಗೂ ಈ ಊರಿಗೆ ಅರಿಕುಠಾರ ಎಂಬ ಹೆಸರಿತ್ತು. ಮೈಸೂರು ಅರಸು ಮನೆತನದ ಚಾಮರಾಜ ಒಡೆಯರ್ ಜನಿಸಿದ್ದರಿಂದ ಅವರ ನೆನಪಿಗಾಗಿ ಚಾಮರಾಜನಗರ ಎಂದು ನಾಮಕರಣ ಮಾಡಲಾಯಿತು. ಚಾಮರಾಜನಗರ ಪಟ್ಟಣದಲ್ಲಿ ೧೮೩೭ರಲ್ಲಿ ಚಾಮರಾಜೇಶ್ವರ ದೇವಾಲಯವನ್ನು ನಿರ್ಮಿಸಲಾಯಿತು. ದೇವಾಲಯವು ಜನನ ಮಂಟಪ, ಜೈನ ಬಸದಿಗಳು, ವೀರಭದ್ರೇಶ್ವರ ದೇವಾಲಯ ಹೊಂದಿದೆ. ಇದೊಂದು ಶೈಕ್ಷಣಿಕ ಮತ್ತು ವಾಣಿಜ್ಯ ಕೇಂದ್ರವು ಆಗಿದೆ.

ಚಾಮರಾಜನಗರ ತಾಲೂಕಿನಲ್ಲಿ ೫ ಹೋಬಳಿಗಳಿದ್ದು, ೨೨೦ ಜನವಸತಿ ಪ್ರದೇಶಗಳನ್ನು ಹೊಂದಿದೆ.

**ಚಾಮರಾಜೇಶ್ವರ ದೇವಾಲಯ**



ಚಾಮರಾಜೇಶ್ವರ ದೇವಾಲಯ ಜಿಲ್ಲೆಯ ಪ್ರಮುಖ ದೇಗುಲಗಳಲ್ಲಿ ಒಂದಾಗಿದೆ. ನಗರದ ಹೃದಯ ಭಾಗದಲ್ಲಿರುವ ದೇವಾಲಯ ಸ್ಥಾಪನೆಯಾದದ್ದು, ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಒಂದು ಕಾಲದಲ್ಲಿ ಅರಿಕುಠಾರ ಎಂಬ ಗ್ರಾಮವಾಗಿದ್ದು, ಇದು ಚಾಮರಾಜ ಒಡೆಯರ್ ಜನಿಸಿದ್ದರಿಂದ ಚಾಮರಾಜನಗರ ಎಂಬ ಹೆಸರನ್ನು ಪಡೆಯಿತು.

**ದೇವಾಲಯದ ಮಹಾದ್ವಾರ**

ಪೂರ್ವ ದಿಕ್ಕಿಗಿದ್ದು ೫ ಅಂತಸ್ತಿನ ಗೋಪುರವಿದೆ. ತುದಿಯಲ್ಲಿ ೫ ಸುಂದರ ಚಿನ್ನದ ರಂಗಿನ ಕಲಶಗಳಿದ್ದು ಮುಂದೆ ಗರುಡಗಂಬವಿದೆ. ದೇವಾಲಯ ಪ್ರವೇಶ ಮಾಡಿದಾಗ ಈಶ್ವರನಿಗೆ ಮುಖ ಮಾಡಿರುವ ಬೃಹತ್ ನಂದಿ ಇದೆ. ದೇವಾಲಯದ ಪ್ರಕಾರದಲ್ಲಿ ೬೪ ಪುರಾತನ ಭಕ್ತರ ವಿಗ್ರಹಗಳಿವೆ. ಉತ್ತರದಲ್ಲಿ ಈಶ್ವರ ವಿಗ್ರಹ, ಈಶಾನ್ಯದಲ್ಲಿ ಯೋಗಶಾಲೆ, ಆಗ್ನೇಯದಲ್ಲಿ ಪಾಕ ಶಾಲೆಯೂ ಇದೆ.

ಇಲ್ಲಿ ವಾಸ್ತುಶಿಲ್ಪವು ಹೊಯ್ಸಳರ ಕಲೆಯನ್ನು ನೆನಪಿಸುತ್ತವೆ. ಈ ದೇವಾಲಯದ ಒಳಭಾಗದಲ್ಲಿ ಕಂಡು ಬರುವ ಚಿತ್ರಗಳೆಂದರೆ ಗಿರಿಜಾ ಕಲ್ಯಾಣ ಸಮುದ್ರಮಥನ ಮತ್ತು ಚಾಮುಂಡೇಶ್ವರಿ, ಇವು ೧೦೦ ವರ್ಷದ ಹಳೆಯವು. ಇಲ್ಲಿ ಪ್ರತಿವರ್ಷ ಆಷಾಢ ಮಾಸದಲಿ ಆಷಾಡದ ಹುಣ್ಣಿಮೆಯ ದಿನ ರಥೋತ್ಸವ ನಡೆಯುತ್ತದೆ. ಈ ರಥೋತ್ಸವಕ್ಕೆ ನವದಂಪತಿಗಳು ಹಣ್ಣು ಜವನವನ್ನು ಎಸೆದು ಭಕ್ತಿ ಭಾವ ಮೆರೆಯುವರು.

**ದೀನ ಬಂಧು**



ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪನವರ ಪುತ್ರರಾದ ಜಿ.ಎಸ್. ಜಯದೇವ್ ಇವರು ದೀನ-ದಲಿತರ ಉದ್ಧಾರಕ್ಕಾಗಿ ಹೆಸರೇ ಸೂಚಿಸುವಂತೆ ದೀನಬಂಧು ಸಂಸ್ಥೆಯನ್ನು ೧೯೯೨ರಲ್ಲಿ ಪ್ರಾರಂಭಿಸಿದರು. ಇದು ಜಿಲ್ಲಾ ಕೇಂದ್ರದಿಂದ ೩ ಕಿ.ಮೀ. ದೂರದಲ್ಲಿ ಹೌಸಿಂಗ್ ಬೋರ್ಡ್ ಕಾಲೋನಿಯ ಪಕ್ಕದ ಅರಣ್ಯ ಇಲಾಖೆಯ ನರ್ಸರಿ ಫಾರಂಗೆ ಹೊಂದಿಕೊಂಡಂತೆ ಇದೆ.

ಸಂಸ್ಥಾಪಕರ ಮೆಚ್ಚುಗೆಗೆ ಪಾತ್ರರಾದ ಅನೇಕ ಸಂಘಸಂಸ್ಥೆಗಳು ಮತ್ತು ದಾನಿಗಳ ಉದಾರ ಕೊಡುಗೆಯಿಂದ ೧ ರಿಂದ ೮ನೇ ತರಗತಿಯವರೆಗೆ ಸ್ವಂತ ಕಟ್ಟಡದಲ್ಲಿ “ಸೃಜನಶೀಲ ಕಲಿಕೆ” ತತ್ವದ ಮಾದರಿಯಲ್ಲಿ ನಡೆಯುತ್ತದೆ. ಅನಾಥ ಮಕ್ಕಳ ವಸತಿ ಸಹಿತ ಶಾಲೆ ಗಂಡು ಹೆಣ್ಣು ಮಕ್ಕಳಿಗೆ ದೀನಬಂಧು ಮಕ್ಕಳ ಮನೆ ಎಂಬ ಹೆಸರಿನ ವಸತಿ ಸಹಿತ ಹೆಣ್ಣು ಮಕ್ಕಳ ಪುನರ್ವಸತಿ ಕೇಂದ್ರಸುಸಜ್ಜಿತ ಕಟ್ಟಡದಲ್ಲಿ ನಡೆಯುತ್ತಿದೆ. ಇದು ಶಿಕ್ಷಕರ ಸಂಪನ್ಮೂಲ ಕೇಂದ್ರ ಹೊಂದಿದ್ದು ಶಿಕ್ಷಕರ ವೃತ್ತಿಪರ ಅಭಿವೃದ್ಧಿಗೆ ಅವಿರತ ಪ್ರಯತ್ನ ನಡೆಸುತ್ತಿದೆ.

**ಸುವರ್ಣಾವತಿ ಜಲಾಶಯ**



ಚಾಮರಾಜನಗರ ತಾಲೂಕಿನ ಜೀವನಾಡಿ ಯಾದ ಸುವರ್ಣಾವತಿ ನದಿಯು ಆಗ್ನೇಯ ಭಾಗದ ಗಜ್ಜಲ ಹಟ್ಟಿ ಎಂಬಲ್ಲಿ ಹುಟ್ಟುತ್ತದೆ. ಈ ನದಿಗೆ ಚಾಮರಾಜನಗರ ಮತ್ತು ಕೊಯಮತ್ತೂರು ರಸ್ತೆಯ ಹೆದ್ದಾರಿಯಲ್ಲಿ ೧೯೭೭ರಲ್ಲಿ ಜಲಾಶಯವನ್ನು ನಿರ್ಮಿಸಲಾಗಿದೆ. ೨೬ ಮೀ. ಎತ್ತರ, ಉದ್ದ ೧೧೫೮ ಮೀ. ಇದ್ದು, ಈ ಜಲಾಶಯವು ಚಾಮರಾಜನಗರ, ಯಳಂದೂರು ಮತ್ತು ಕೊಳ್ಳೇಗಾಲ ತಾಲೂಕಿನ ಪ್ರದೇಶಗಳಿಗೆ ನೀರೊದಗಿಸುತ್ತದೆ. ಕಾವೇರಿ ಕಣಿವೆಗೆ ಸೇರಿದ ಈ ಜಲಾಶಯದ ನೀರಿನ ಸಾಮರ್ಥ್ಯ ೨೫೮,೭೮ ಕ್ಯೂಸೆಕ್ಸ್ ಇದೆ.

ಇದರ ೨ ಕಿ.ಮೀ. ದೂರದಲ್ಲಿ ರಸ್ತೆಯ ಬಲಭಾಗದಲ್ಲಿ ಚಿಕ್ಕಹೊಳೆ ಅಣೆಕಟ್ಟು ಇದ್ದು ಇದು ಮಧ್ಯಮಗಾತ್ರದ ಅಣೆಕಟ್ಟು ಆಗಿದೆ. ಈ ಎರಡೂ ಜಲಾಶಯಗಳು ನಿಸರ್ಗದ ಮಡಿಲಲ್ಲಿದ್ದು, ನೀರಾವರಿ, ಮೀನುಗಾರಿಕೆ, ತೋಟಗಾರಿಕೆಗೆ ಪ್ರೋತ್ಸಾಹವಿದೆ.

ಇದು ನೀರಾವರಿ ಇಲಾಖೆಗೆ ಸೇರಿದ್ದು ಪ್ರವಾಸಿಗರಿಗೆ ಉಳಿದುಕೊಳ್ಳಲು ವಸತಿ ಸೌಕರ್ಯವಿದೆ. ಜಿಲ್ಲಾ ಕೇಂದ್ರದಿಂದ ೧೮ ಕಿ.ಮೀ. ದೂರದಲ್ಲಿದೆ.

**ಗಂಗರ ಇತಿಹಾಸ ಬಿಂಬಿಸುವ ನರಸಮಂಗಲ**

ಚಾಮರಾಜನಗರದಿಂದ ೨೪ ಕಿ.ಮೀ.





ಚಾಮರಾಜನಗರ ಜಿಲ್ಲಾ ಕೇಂದ್ರದಿಂದ ನೈರುತ್ಯಕ್ಕೆ ಸುಮಾರು ೨೪ ಕಿ.ಮೀ. ದೂರ ದಲ್ಲಿರುವ ಗ್ರಾಮ ನರಸಮಂಗಲ, ಈ ಸ್ಥಳವು ಪ್ರಾಚೀನ ರಾಮಲಿಂಗೇಶ್ವರ ದೇವಾಲಯದಿಂದ ಪ್ರಸಿದ್ಧವಾಗಿದೆ. ಗಂಗರ ಕಾಲದಲ್ಲಿ ಅನೇಕ ಸುಂದರ ದೇವಾಲಯ ಮತ್ತು ಬಸದಿಗಳು ನಿರ್ಮಾಣಗೊಂಡವು ಅವುಗಳಲ್ಲಿ ಈ ದೇವಾಲಯವು ಒಂದು. ಇಲ್ಲಿನ ಶಿವಲಿಂಗವು ೬ ಅಡಿ ಎತ್ತರ ೧೨ ಅಡಿಗಳನ್ನು ಸುತ್ತಳತೆ ಹೊಂದಿದೆ.

ಈ ದೇವಾಲಯವು ವಿಶಾಲವಾದ ಗರ್ಭಗೃಹ, ಕಿರಿದಾದ ಸುಖನಾಸಿ ಒಂಭತ್ತು ಅಂಕಣಗಳ ನವರಂಗಗಳಿವೆ. ಮೇಲೆ ವಿಮಾನ ಗೋಪುರವಿದೆ. ಇದು ತಮಿಳುನಾಡಿನ ಮಹಾಬಲಿಪುರಂ ಶಿಲ್ಪವನ್ನು ಹೋಲುವುದು. ಶಿಲ್ಪಗಳು ಬಹು ಸುಂದರ ಕಲಾ ಕೃತಿಗಳಾಗಿವೆ.

ರಾಮಾಯಣ ಮಹಾಭಾರತ ಕಥೆಗೆ ಸಂಬಂಧಪಟ್ಟ ಹಲವಾರು ಸನ್ನಿವೇಷಗಳನ್ನು ಗೋಡೆಗಳ ಮೇಲೆ ಕೆತ್ತಲಾಗಿದೆ. ಈ ದೇವಾಲಯವನ್ನು ಭಾರತ ಸರ್ಕಾರವು ೧೯೫೮ರಲ್ಲಿ ರಾಷ್ಟ್ರೀಯ ಸ್ಮಾರಕವೆಂದು ಘೋಷಿಸಲಾಗಿದೆ.

**ಮಲೆಯೂರಿನ ಕನಕಗಿರಿ**

ಜಿಲ್ಲಾ ಕೇಂದ್ರದಿಂದ : ೨೫ ಕಿ.ಮೀ.



ಚಾಮರಾಜನಗರ ಪಶ್ಚಿಮಕ್ಕೆ ೨೫ ಕಿ.ಮೀ. ದೂರದಲ್ಲಿರುವ ಮಲೆಯೂರಿನ ಕನಕಗಿರಿ ಜಗತ್ತಿನ ಸುಪ್ರಸಿದ್ಧ ಜೈನ ಕ್ಷೇತ್ರಗಳಲ್ಲಿ ಒಂದಾಗಿದೆ. ಮಲೆಯೂರಿನ ಪಶ್ಚಿಮಕ್ಕಿರುವ ಈ ಬೆಟ್ಟದ ಬಂಡೆಗಳ ಮೇಲೆ ಚರಣ ಪಾದುಕೆಗಳು, ಶಿಲಾಶಾಸನಗಳು, ಸಮಾಧಿಮಂಟಪ ಮತ್ತು ಗುಹೆಗಳಿವೆ. ೧೦ನೇ ಶತಮಾನಕ್ಕೆ ಸೇರಿದ ಕನಕಗಿರಿ ಮೇಲಿನ ಪಾರ್ಶ್ವನಾಥ ಬಸದಿ ಅತಿ ಪುರಾತನ ಹಾಗೂ ಸುಂದರ ಬಸದಿಯಾಗಿದೆ. ಈ ಸ್ಥಳದಲ್ಲಿ ನಾಗಾರ್ಜುನನಿಗೆ ಪದ್ಮಾ ವತಿ ಅಮ್ಮನವರು ಲೋಹ ವನ್ನು ಚಿನ್ನ ಮಾಡುವ ವಿದ್ಯೆಯನ್ನು ತಿಳಿಸಿದರು. ಈ ಕಾರಣದಿಂದ ಇದಕ್ಕೆ ಕನಕಗಿರಿ ಎಂಬ ಹೆಸರು ಬಂದಿದೆ.

ಗಂಗರು ಮತ್ತು ಹೊಯ್ಸಳ ಕಾಲದ ಕಟ್ಟಡಗಳು, ಶಿಲಾಶಾಸನಗಳು ಇಲ್ಲಿ ಕಂಡು ಬರುತ್ತವೆ. ಇಲ್ಲಿನ ಶಿಲಾಶಾಸನಗಳ ಪ್ರಕಾರ ಅಜಿತಮುನಿ ಚಂದ್ರಸೇನಾಚಾರ್ಯ ಮುಂತಾದ ಹಲವರು ಸಲ್ಲೇಖನ ವ್ರತ ಕೈಗೊಂಡು ಸಮಾಧಿ ಪಡೆದರೆಂದು ತಿಳಿಯುತ್ತದೆ. ‘ಕಲ್ಯಾಣಕಾರಕ ಚಿಕಿತ್ಸಾಶಾಸ್ತ್ರ” ಗ್ರಂಥ ಬರೆದ ಶ್ರೀ ಪೂಜ್ಯಪಾದರು ಈ ಊರಿನವರು.

**ಹರದನ ಹಳ್ಳಿ ದಿವ್ಯಲಿಂಗೇಶ್ವರ ದೇಗುಲ**




ಚಾಮರಾಜನಗರದಿಂದ : ೫ ಕಿ.ಮೀ.

ಚಾಮರಾಜನಗರ ಜಿಲ್ಲಾ ಕೇಂದ್ರದಿಂದ ೫ ಕಿ.ಮೀ. ದೂರದಲ್ಲಿರುವ ಹೋಬಳಿ ಕೇಂದ್ರ ಹರದನ ಹಳ್ಳಿ ಗ್ರಾಮದಲ್ಲಿ ಈ ದೇವಾಲಯವಿದೆ. ಹೊಯ್ಸಳರು, ವಿಜಯನಗರ ಅರಸರು ಮತ್ತು ಮೈಸೂರು ಅರಸರು ಆಳುತ್ತಿದ್ದರು. ಈ ಊರಿನಲ್ಲಿ ಹಿಂದೆ ಕೋಟೆಯಿದ್ದು ಈಗ ಹಾಳಾಗಿದೆ. ಈ ಊರಿಗೆ ಕಳಸಪ್ರಾಯವಾಗಿರುವುದು ದಿವ್ಯ ಲಿಂಗೇಶ್ವರ ದೇವಾಲಯ. ಈ ದೇಗುಲವು ಗೋಪುರ ಮತ್ತು ಗರುಡಗಂಭವನ್ನು ಒಳಗೊಂಡು ಸುಂದರವಾಗಿದೆ. ೧೩ನೇ ಶತಮಾನದಲ್ಲಿ ಹೊಯ್ಸಳ ವೀರಬಲ್ಲಾಳದ ಕಾಲದಲ್ಲಿ ನಿರ್ಮಾಣವಾಗಿದೆ. ದೇವಾಲಯದ ಗರ್ಭಗುಡಿಯಲ್ಲಿ ಶಿವಲಿಂಗವಿದ್ದು ಕಲಾತ್ಮಕವಾಗಿದೆ. ಇದರಿಂದ ೧೦೫ ಅಡಿ ದೂರದಲ್ಲಿ ನಂದೀಶ್ವರನ ವಿಗ್ರಹವಿದೆ. ಇದೊಂದು ಐತಿಹಾಸಿಕ ಹಾಗೂ ಧಾರ್ಮಿಕ ಕೇಂದ್ರವಾಗಿದ್ದು ಆಕರ್ಷಣಿಯ ಸ್ಥಳವಾಗಿದೆ. ಈ ಗ್ರಾಮವು ಮಹಿಮಾಪುರುಷರಾದ ಎಡೆಯೂರು ಸಿದ್ಧಲಿಂಗೇಶ್ವರ ಜನ್ಮಸ್ಥಳವೂ ಹೌದು.

**ಬೂದಿ ಪಡಗ**

ಚಾಮರಾಜನಗರದಿಂದ ೩೦ ಕಿ.ಮೀ. ದೂರ



ಸುವರ್ಣಾವತಿ ಜಲಾಶಯದ ಹಿನ್ನೀರಿನ ಕಾಡಂಚಿನಲ್ಲಿರುವ ಬೂದಿಪಡಗ ಪ್ರಸಿದ್ಧ ವನ್ಯಜೀವಿ ವಿಶ್ರಾಂತಿಧಾಮ, ಮೈಸೂರು ಮಹಾರಾಜರು – ಬ್ರಿಟಿಷರ ಅವಧಿಯಲ್ಲಿ ನಿರ್ಮಿಸಲಾದ ವಸತಿಗೃಹಗಳು ವಿಶಾಲಹುಲ್ಲು ಮೈದಾನ. ಅಮೂಲ್ಯ ವನ್ಯ ಜೀವಿಗಳು, ಬೂದಿಪಡಗದ ವಿಶೇಷಗಳು, ವನ್ಯಜೀವಿ ಛಾಯಾ ಗ್ರಾಹಕರಿಗೆ, ಪ್ರವಾಸಿಗರಿಗೆ ಸಂಶೋಧಕರಿಗೆ ಇದು ಅಚ್ಚುಮೆಚ್ಚಿನ ಪ್ರವಾಸಿ ಸ್ಥಳವಾಗಿದೆ. ಬೂದಿಪಡಗ ಬಿಳಿಗಿರ ರಂಗನ ಬೆಟ್ಟ ವನ್ಯ ಜೀವಿಧಾಮದ ಭಾಗವಾಗಿದೆ.

**ಬೇಡಗುಳಿ**



ಚಾಮರಾಜನಗರದಿಂದ ತಮಿಳುನಾಡಿಗೆ ತೆರಳುವ ಮುಖ್ಯ ರಸ್ತೆಯ ನೀಲಗಿರಿ ಶ್ರೇಣಿಯ ಅಂಚಿನಲ್ಲಿರುವ ಬೇಡಗುಳಿ ಕರ್ನಾಟಕ – ತಮಿಳುನಾಡಿನ ಸೀಮಾರೇಖೆ. ಚಾಮರಾಜನಗರ ದಿಂದ ೫೦ ಕಿ.ಮೀ. ದೂರ ದಲ್ಲಿರುವ ನಿತ್ಯಹರಿದ್ವರ್ಣದ ವನ್ಯಜೀವಿಧಾಮ. ಬೇಡಗುಳಿ ಪ್ರದೇಶದಲ್ಲಿ ವಾಸಿಸುವ ಗಿರಿಜನರು ಮತ್ತು ಯುರೋಪಿಯನ್ನರ ಕಾಲದ ಕಾಫಿ ತೋಟಗಳು ವಿಶೇಷಗಳು. ಬೇಡಗುಳಿ ಗಿರಿಜನ ಹಾಡಿಗಳು ಅವರ ಹಾಡುಪಾಡು. ಅವರ ಜೀವನ ಶೈಲಿ ಮತ್ತು ಸಂಸ್ಕೃತಿ ಸಂಪ್ರದಾಯಗಳು ಅಧ್ಯಯನ ಯೋಗ್ಯವಾಗಿದೆ. ಸುಂದರ ಗಿರಿಶ್ರೇಣಿಗಳು ಅದ್ಭುತ ಕಣಿವೆಗಳು ಮನೋಹರ ಜಲಪಾತಗಳು ಆಕರ್ಷಕ. ವನ್ಯಜೀವಿಗಳು ಬೇಡಗುಳಿ ಅರಣ್ಯ ಪ್ರದೇಶದ ವಿಶೇಷ ಅರಣ್ಯ ಇಲಾಖೆಯ ನಿರ್ವಹಣೆಯಲ್ಲಿರುವ ಬೇಡಗುಳಿ ಅತಿಥಿಗೃಹ ನೂರು ವರುಷಗಳಷ್ಟು ಪುರಾತನವಾಗಿದೆ. ವನ್ಯಜೀವಿ ಪ್ರದೇಶವಾಗಿರುವುದರಿಂದ ಪ್ರವೇಶಿಸಲು ಅರಣ್ಯ ಇಲಾಖೆ ಅನುಮತಿ ಅಗತ್ಯ.

**ಜೋಡಿಗೆರೆ**



ಜೋಡಿಗೆರೆ ಸೌಂದರ್ಯವನ್ನು ಒಂದೆರಡು ಮಾತಿನಲ್ಲಿ ವರ್ಣಿಸಲಾಗದು. ಇದೊಂದು ಪ್ರಕೃತಿಯ ಅಪ್ರತಿಮ ಕೊಡುಗೆ ನಿಂತು ನೋಡಿದರೆ ನೋಡಿದಷ್ಟು ಆನಂದ. ವಿಶಾಲ ಹುಲ್ಲು ಗಾವಲು. ಶೋಲಾ ಅರಣ್ಯ ಪ್ರದೇಶ. ಮನಬಿಚ್ಚಿ ಓಡಾಡುವ ವನ್ಯಜೀವಿಗಳು ಸುಯ್‌ಗುಡುವ ತಂಗಾಳಿ. ಇವೆಲ್ಲವೂ ಒಂದು ಮಾಯಾಲೋಕವನ್ನು ಸೃಷ್ಟಿಸುತ್ತವೆ. ಜಗತ್ತಿನ ಅಪರೂಪದ ಪ್ರದೇಶವೆಂಬಂತೆ ವನ್ಯಜೀವಿಗಳು ಹುಲ್ಲುಗಾವಲಿನಲ್ಲಿ ಗುಂಪುಗುಂಪಾಗಿ ನಲಿದಾಡುವುದನ್ನು ನೋಡಿದರೆ ಇದೊಂದು ಮಿನಿ ಜುರಾಸಿಕ್ ಪಾರ್ಕ್‌ನಂತೆ ಕಾಣುತ್ತದೆ. ಸಮುದ್ರ ಮಟ್ಟದಿಂದ ಸುಮಾರು ೧೬೦೦ ಮೀಟರ್‌ಗಳಷ್ಟು ಎತ್ತರದಲ್ಲಿರುವ ಜೋಡಿಗೆರೆ ಬಿಳಿಗಿರಿ ರಂಗನಬೆಟ್ಟ ವನ್ಯಜೀವಿಧಾಮದ ಒಂದು ಭಾಗವಾಗಿದ್ದು ಇಲ್ಲಿಗೆ ಪ್ರವೇಶಿಸಲು ಅರಣ್ಯ ಇಲಾಖೆಯ ಅನುಮತಿ ಅಗತ್ಯ.

**ಕೆ. ಗುಡಿ (ಕ್ಯಾತೇದೇವರ ಗುಡಿ)**



ಚಾಮರಾಜನಗರದ ಪೂರ್ವಕ್ಕಿರುವ ಪ್ರಕೃತಿ ಧಾಮ. ಸಮುದ್ರ ಮಟ್ಟದಿಂದ ೧೪೫೦ ಮೀಟರ್‌ಗಳಷ್ಟು ಎತ್ತರದಲ್ಲಿದೆ. ಇಲ್ಲಿ ಕರ್ನಾಟಕ ಜಂಗಲ್ ಲಾಡ್ಜ್ ನ ವನ್ಯಜೀವಿ ಪ್ರವಾಸೋದ್ಯಮ ಕೆಲಸ ಮಾಡುತ್ತಿದೆ. ಜೊತೆಗೆ ಅರಣ್ಯ ಇಲಾಖೆಯ ಅತಿಥಿಗೃಹವಿದೆ. ಅರಣ್ಯ ಇಲಾಖೆಯ ಆನೆ ಸಫಾರಿ ಮತ್ತು ವನ್ಯಜೀವಿ ಸಫಾರಿ ಬಹಳ ಪ್ರಸಿದ್ಧ. ಕೆ. ಗುಡಿಗೆ ದೇಶ-ವಿದೇಶಗಳು ಪ್ರವಾಸಿಗರ ಆಗಮನವಿದೆ. ಪ್ರಾಣಿ ಪಕ್ಷಿ, ಪ್ರಕೃತಿ ಸಂಶೋಧಕರಿಗೆ ಮತ್ತು ಪ್ರವಾಸಿಗರಿಗೆ ಕೆ. ಗುಡಿ ರಮ್ಯತಾಣವಾಗಿದ್ದು ಇಲ್ಲಿ ಆನೆ, ಹುಲಿ, ಚಿರತೆ, ಕಾಡೆಮ್ಮೆ, ಕರಡಿ, ಜಿಂಕೆ, ಕಡವೆ ಈ ಅರಣ್ಯದ ಪ್ರಮುಖ ವನ್ಯಜೀವಿಗಳು.

**ಬೆಲ್ಲತ್ತ ಪಕ್ಷಿರಾಶಿ**



ಚಾಮರಾಜನಗರ ತಾಲ್ಲೋಕಿ ನಲ್ಲಿರುವ ಬೆಲ್ಲತ್ತ ಜಲಾಶಯ ಬಿಳಿಗಿರಿರಂಗನ ಬೆಟ್ಟದ ಕಾಡಂಚಿನಲ್ಲಿದೆ. ಕಾಡಂಚಿಗೆ ತಾಗಿಕೊಂಡಿರುವ ಹಿನ್ನೀರಿ ನಿಂದಾಗಿ ಪ್ರಾಣಿಗಳು ಪಕ್ಷಿಗಳಿಗೆ ಸಮೃದ್ಧ ಪ್ರದೇಶವಾಗಿದೆ. ಈ ಜಲಾಶಯದ ಸುತ್ತ ದೇಶ ವಿದೇಶಗಳ ವೈವಿಧ್ಯಮಯ ಪಕ್ಷಿಗಳ ಸಮ್ಮಿಲನವಾಗುತ್ತದೆ. ನಿಸರ್ಗ ಪ್ರಿಯರಿಗೆ ಪಕ್ಷಿ ಛಾಯಗ್ರಾಹಕರಿಗೆ ಮತ್ತು ಸಂಶೋಧಕರಿಗೆ ಇದೊಂದು ಉತ್ತಮ ತಾಣವಾಗಿದೆ.

# ಯಳಂದೂರು ತಾಲ್ಲೂಕು ಪರಿಚಯ

ಬಹಳ ಹಿಂದೆ ಯಳಂದೂರು ಪದಿನಾಡಿನ ರಾಜವಂಶಸ್ಥರ ಮುಖ್ಯ ಪಟ್ಟಣ ಅಥವಾ ರಾಜಧಾನಿಯಾಗಿತ್ತು. ಈ ವಿಷಯ ಹದಿನಾಡಿನ ಉಲ್ಲೇಖ ಕ್ರಿ.ಶ. ೧೦೧೮ರ ಚೋಳ ದೊರೆ ಒಂದನೇ ರಾಜೇಂದ್ರನ ಕಾಲದ ಶಾಸನದಲ್ಲಿ ಕಂಡು ಬಂದಿದೆ. ಜೈನಧರ್ಮದ ಪ್ರಮುಖ ಮುನಿಗಳಾದ ಶ್ರೀ ಬಾಲಚಂದ್ರ ಮುನಿಗಳ ಹೆಸರು ಈ ಊರಿಗೆ ಇತ್ತು. ನಂತರ ಬಾಲೇಂದುಪುರ ಎಂದಾಯಿತು. ನಂತರ ಎಳವಂದೂರಾಯಿತು. ಮುಂದೆ ಯಳಂದೂರಾಯಿತು. ಇಲ್ಲಿ ಜೈನ ಧರ್ಮದ ಮತ್ತು ವೀರಶೈವ ಧರ್ಮದ ಅನೇಕ ಹೆಸರಾಂತ ಮಹಾಕವಿಗಳು ಇಲ್ಲಿ ಇದ್ದರು. ಇವರು ರಚಿಸಿರುವ ಲೀಲಾವತಿ ಪ್ರಬಂಧ ರಾಜಶೇಖರ ವಿಲಾಸ ಹಾಗೂ ಸಂಚಿ ಹೊನ್ನಮ್ಮ ರಚಿಸಿದ ಹದಿಬದಿಯ ಧರ್ಮ ಶ್ರೇಷ್ಠ ಕೃತಿಗಳಾಗಿವೆ. ಇಂತಹ ಪುಣ್ಯ ಭೂಮಿಯಲ್ಲಿ (ಸುವರ್ಣಾವತಿ) ಹೊನ್ನು ಹೊಳೆ ಹರಿಯುತ್ತದೆ. ಇದಕ್ಕೆ ಇರುವ ದಂತ ಕಥೆಯ ಉಲ್ಲೇಖವು ಶಾಸನವೊಂದರಲ್ಲಿ ದೊರೆಯುತ್ತದೆ. ಯಳಂದೂರು ಸಂಸದ್ಭರಿತವಾದ ಹಾಗೂ ಜನಾಕರ್ಷಕವಾದ ಸ್ಥಳವಾಗಿದ್ದು ನಿರ್ದಿಷ್ಟ ರಾಜಮನೆತನಗಳು ಇದ್ದವು ಎಂಬುದು ತಿಳಿದು ಬಂದಿದೆ.

**ಬಳೇ ಮಂಟಪ**



ಯಳಂದೂರಿನ ಗೌರೀಶ್ವರ ದೇವಾಲಯದ ಮುಖ ಮಂಟಪವನ್ನು ಕ್ರಿ.ಶ. ೧೬೫೪ರಲ್ಲಿ ಮುದ್ದುರಾಜನು ಬಹಳ ರಮ್ಯವಾಗಿ ಕಟ್ಟಿಸಿದ್ದಾನೆ. ಇದು ಬಹಳ ಸುಂದರವಾದ ಅತ್ಯಂತ ಪ್ರಾಚೀನ ಹಾಗೂ ಕಲಾಪೂರ್ಣ ಕಗ್ಗಲಿನ ಮಂಟಪವಾಗಿದೆ. ಈ ಮಂಟಪ ಹಂಪೆಯ ೨೭ ಕಲ್ಲಿನ ರಥವನ್ನು ಹೋಲುತ್ತದೆ. ಈ ಮಂಟಪವು ಬೇಲೂರು ಮತ್ತು ಹಳೇ ಬೀಡಿನ ದೇವಾಲಯದ ಶಿಲ್ಪಕಲೆಯಂತೆ ಇದೆ. ಈ ಮಂಟಪವೂ ಚತುರ್ಮುಖಗಳನ್ನು ಹೊಂದಿದ್ದು ಸುಂದರವಾದ ಕಲ್ಲಿನ ಬಳೆಗಳಿಂದ ಕೂಡಿದ ಮಂಟಪವಾಗಿದೆ. ಶಿಲೆಯ ಗೋಡೆಯಲ್ಲಿ ಶೈವ ಪುರಾಣದ, ರಾಮಾಯಣದ ಹಾಗೂ ಮಹಾಭಾರತದ ಕೆಲವು ಘಟನೆಗಳನ್ನು ಅತ್ಯಂತ ಮನೋಹರವಾಗಿ ಸುಂದರವಾಗಿ ಕೆತ್ತಿರುವುದನ್ನು ನೋಡಬಹುದು. ಈ ಮಂಟಪದ ಮಧ್ಯಭಾಗದಲ್ಲಿ ಒಂದೇ ಕಲ್ಲಿನಿಂದ ಕಮಲದ ಮೊಗ್ಗನ್ನು ಬಿಡಿಸಿ ಮೇಲ್ಭಾಗದಲ್ಲಿ ಜೋಡಿಸಿರುವುದು

ಮನೋಹರವಾಗಿದೆ. ಈ ಮಂಟಪದ ಮೂಲೆಗಳಲ್ಲಿ ಬಳೆಗಳನ್ನು ಒಂದರೊಳಗೊಂದು ಜೋಡಿಸಿದಂತೆ ಒಂದೇ ಕಲ್ಲಿನಿಂದ ಮಾಡಿರುವುದು ಅದ್ಭುತವಾಗಿದೆ. ಈ ಬಳೆಗಳು ಇರುವುದರಿಂದಲೇ ರೂಢಿಯಿಂದ ಈ ಮಂಟಪವನ್ನು ಬಳೆ ಮಂಟಪ ಎಂದು ಕರೆಯುತ್ತಾರೆ.

**ಗೌರೀಶ್ವರ ದೇವಾಲಯ**



ಯಳಂದೂರಿನಲ್ಲಿರುವ ಗೌರೀಶ್ವರ ದೇವಾಲಯದ ವೈಶಿಷ್ಟತೆಯನ್ನು ತಿಳಿಯಲು ಇಲ್ಲಿರುವ ಶಿಲಾಶಾಸನ ಒಂದೇ ಆಧಾರ ಯಳಂದೂರಿನಲ್ಲಿ ಆಳಿದ ರಾಜ ಮನೆತನಗಳಲ್ಲಿ ಪದಿನಾಡ ಅರಸರೇ ಪ್ರಮುಖರು. ಈ ಮನೆತನದ ಮೊದಲನೆರಾಜ ಸಿಂಗದೇವಭೂಪನು ಗೌರೀಶ್ವರ ದೇವಾಲಯವನ್ನು ಮುದ್ದುರಾಜನು ಕ್ರಿ.ಶ. ೧೬೫೪ರಲ್ಲಿ ದೇವಾಲಯದ ಮುಖ ಮಂಟಪ ಪಂಚಲಿಂಗಗಳನ್ನೊಳಗೊಂಡ ಗುಡಿಗಳನ್ನು ಕಟ್ಟಿಸಿದ್ದಾನೆ. ಈ ಗೌರೀಶ್ವರನು ಹಿಂದೆ ಕೃತಾಯುಗದಲ್ಲಿ ಜಮದಗ್ನಿ ಮಹಾರ್ಷಿಯಿಂದ “ತ್ರಿಪುರಾಂತಕ”ನೆಂದೂ ತ್ರೇತಾಯುಗದಲ್ಲಿ ಶ್ರೀರಾಮಚಂದ್ರನಿಂದ “ನೀಲಕಂಠ” ನೆಂದೂ, ದ್ವಾಪರಾಯುಗದಲ್ಲಿ ಪಾಂಡವರಿಂದ ಲೋಕೇಶ್ವರನೆಂದೂ ಕಲಿಯುಗದಲ್ಲಿ ಪದಿನಾಡಿನ ರಾಜ ವಂಶಸ್ಥರು ಗೌರೀಶ್ವರನೆಂದೂ ಪೂಜಿಸುತ್ತಿದ್ದರು. ಈ ದೇವಾಲಯದ ಆವರಣದಲ್ಲಿರುವ ಎರಡು ಪಗಡೆ ಮರಗಳು ದೇವಾಲಯದ ಆವರಣವನ್ನು ಬೇಸಿಗೆಯಲ್ಲೂ ತಂಪಾಗಿಸುತ್ತಿದೆ.

**ಬಿಳಿಗಿರಿರಂಗನಬೆಟ್ಟ**





ಪೂರ್ವ ಘಟ್ಟದಲ್ಲಿ ಮಲೈ ಮಹಾದೇಶ್ವರ ಬೆಟ್ಟ ಶ್ರೇಣಿ ಹಾಗೂ ದಿಂಬಮ್ ಬೆಟ್ಟ ಶ್ರೇಣಿಗಳ ನಡುವೆ ೩೦ ಮೈಲಿ ದೂರ ಫಲವತ್ತಾದ ಮಣ್ಣು ಮತ್ತು ದಟ್ಟ ಅರಣ್ಯದಿಂದ ಕೂಡಿರುವ ಬೆಟ್ಟವೇ ಬಿಳಿಗಿರಿರಂಗನ ಬೆಟ್ಟ. ಯಳಂದೂರು ತಾಲ್ಲೂಕಿನಿಂದ ೧೪ ಕಿ.ಮೀ. ದೂರದಲ್ಲಿರುವ ಈ ಬೆಟ್ಟವು ಬಿಳಿಕಲ್ಲು ಬೆಟ್ಟ. ಶ್ವೇತಾದ್ರಿಬೆಟ್ಟ. ಬಿಳಿಗಿರಿರಂಗಸ್ವಾಮಿ ಬೆಟ್ಟ ಎಂದು ಹಲವಾರು ಹೆಸರುಗಳಿಂದ ಪ್ರಸಿದ್ಧವಾಗಿದೆ. ಈ ಬೆಟ್ಟವು ಸಮುದ್ರಮಟ್ಟದಿಂದ ೪೪೭೦ ಅಡಿಗಳ ಎತ್ತರದಲ್ಲಿದ್ದು, ಔಷಧಿ ಸಸ್ಯಗಳಿಂದಲೂ, ತೇಗ, ಬೀಟೆ, ಹೊನ್ನೇ, ಮತ್ತಿ, ಬಿದುರು, ಮುಂತಾದ ಬೆಲೆ ಬಾಳುವ ಮರಗಳಿಂದ ಕೂಡಿದ ದಟ್ಟ ಅರಣ್ಯ ಪ್ರದೇಶವಾಗಿದೆ. ಇಲ್ಲಿ ಹುಲಿ, ಚಿರತೆ, ಜಿಂಕೆ, ಆನೆ, ಕಾಡೆಮ್ಮೆ, ಕರಡಿ, ಮುಂತಾದ ಕಾಡು ಮೃಗಗಳು ಇವೆ. ಈ ಕಾನನ ಪ್ರದೇಶವನ್ನು ಪಾಂಡವರ ಕಾಲದಲ್ಲಿ ಚಂಪಕಾರಣ್ಯ ಎಂದು, ಗಂಗರ ಕಾಲದಲ್ಲಿ ಗಜಾರಾಣ್ಯ ಎಂದು ಕರೆಯುತ್ತಿದ್ದರು. ಶಿಲಾಯುಗದ ಮಾನವರು ಬಳಸುತ್ತಿದ್ದ ಆಯುಧಗಳು, ಮಡಿಕೆಗಳು, ಮತ್ತು ಅವರ ಸಮಾಧಿಗಳು, ಕಂಡು ಬಂದಿದೆ. ಬಿಳಿಗಿರಿರಂಗಸ್ವಾಮಿ ಬೆಟ್ಟದಲ್ಲಿರುವ ಶ್ರೀ ರಂಗಸ್ವಾಮಿ ದೇವಾಲಯವು ವಿಜಯನಗರ ಅರಸರ ಕಾಲದಲ್ಲಿ ನಿರ್ಮಾಣವಾಗಿದೆ. ಏಪ್ರಿಲ್ ಮೇ ತಿಂಗಳಲ್ಲಿ ನಡೆಯುವ ದೊಡ್ಡ ಜಾತ್ರೆಯು ಬಹಳ ಪ್ರಸಿದ್ಧಿಯನ್ನು ಪಡೆದಿದೆ.

**ದೊಡ್ಡ ಸಂಪಿಗೆ**



ಇದು ಬಿಳಿಗಿರರಂಗನ ಬೆಟ್ಟದ ಕಾಡಿಗೆ ಸೇರಿದ ಪ್ರದೇಶದಲ್ಲಿದ್ದು ಈ ಸ್ಥಳದಲ್ಲಿ ಭಾರ್ಗವೀ ನದಿ ನಯನ ಮನೋಹರವಾದ ಕಣಿವೆಯಲ್ಲಿ ಹರಿಯುತ್ತಿದೆ. ಪರಶುರಾಮನು ಮಾತೃ ಹತ್ಯಾ ದೋಷ ಪರಿಹಾರಕ್ಕಾಗಿ ಈ ಪರ್ವತದ ಮೇಲೆ ತಪಸ್ಸಾಚರಿಸಿದ ರೆಂದು ಪ್ರತೀತಿ. ಈ ಸ್ಥಳದಲ್ಲಿ ದೊಡ್ಡ ಸಂಪಿಗೆ ವೃಕ್ಷವಿದೆ. ಈ ಮಹಾವೃಕ್ಷದಲ್ಲಿ ೩ ಕೊಂಬೆಗಳಿದ್ದು ಇವು ಬ್ರಹ್ಮ-ವಿಷ್ಣು ಮತ್ತು ಮಹೇಶ್ವರರ ಸಂಕೇತ ಎಂದು ತಿಳಿಯಲಾಗಿದೆ. ಈ ಮಹಾವೃಕ್ಷವನ್ನು 'ಸೋಲಿಗರು' ತಮ್ಮ ಆರಾಧ್ಯ ದೈವವಾಗಿ ಭಯ ಭಕ್ತಿಯಿಂದ ಪೂಜಿಸುತ್ತಾರೆ.

**ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ (ವಿ.ಜಿ.ಕೆ.ಕೆ.)**



ತಲೆತಲಾಂತರದಿಂದ ಗುಡ್ಡಗಾಡುಗಳಲ್ಲಿ ಸಂಚರಿಸುತ್ತಾ ನಾಡಿನ ಸಂಪರ್ಕವನ್ನು ಕಳೆದುಕೊಂಡಿದ್ದ ಸೋಲಿಗ ಬುಡಕಟ್ಟು ಜನರಲ್ಲಿ ಆತ್ಮ ವಿಶ್ವಾಸ ತುಂಬಿ ವಂಶ ಪರಂಪರೆಯಾಗಿ ಅವರಲ್ಲಿ ಮನೆ ಮಾಡಿದ್ದ ಅನಿಮಿಯ ರೋಗದಿಂದ ಅವರನ್ನು ಪಾರು ಮಾಡಿ ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಪ್ರಗತಿ ಸಾಧಿಸುವ ದೆಸೆಯಲ್ಲಿ ೧೯೮೧ರಲ್ಲಿ ಅಸ್ತಿತ್ವಕ್ಕೆ ಬಂದ ಕೇಂದ್ರವೇ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ.

ಸೋಲಿಗರ ಪ್ರಗತಿಯನ್ನು ಕೇಂದ್ರವಾಗಿರಿಸಿಕೊಂಡಿರುವ ಈ ಕೇಂದ್ರ ಅವರಿಗೆ ಸೀಮಿತವಾಗಿರದೆ, ಜೇನು ಕುರುಬ, ಕಾಡು ಕುರುಬ, ಬೆಟ್ಟ ಕುರುಬ, ಪಣಿಯ, ಹಕ್ಕಿಪಿಕ್ಕಿ, ಯರವ, ಲಂಬಾಣಿ,ಕೊರಮ ಇತ್ಯಾದಿ ಬುಡಕಟ್ಟಿನ ಜನರ ಪ್ರಗತಿಗೆ ಶ್ರಮಿಸುತ್ತಿದೆ.

ಆರಂಭದಲ್ಲಿ ಏಳು ಮಕ್ಕಳ ಪ್ರವೇಶದೊಂದಿಗೆ ಆರಂಭವಾದ ಪ್ರಾಥಮಿಕ ಶಾಲೆ, ಇಂದು ಪ್ರೌಢ ಶಾಲೆ, ಪದವಿಪೂರ್ವ ಕಾಲೇಜು, ಮತ್ತು ವೃತ್ತಿಪರ ಕಾಲೇಜನ್ನು ಹೊಂದಿರುವುದರ ಜೊತೆಗೆ ಸಾಮಾಜಿಕವಾಗಿಯೂ ಬೆಳೆದು ಹೆಮ್ಮರವಾಗಿದೆ. ಮತ್ತು ಬುಡಕಟ್ಟು ಜನರ ಅರಿವಿನ ಆಶ್ರಮಧಾಮವಾಗಿದೆ.

ಸೋಲಿಗರ ಬದುಕನ್ನು ಹಸನು ಮಾಡಲು ಜೀವನ ತ್ಯಾಗ ಮಾಡಿದ ಡಾ. ಎಚ್. ಸುದರ್ಶನ್ ರವರಿಗೆ ಮಹತ್ಕಾರ್ಯವನ್ನು ಪ್ರಶಂಸಿಸಿ ೯ ಡಿಸೆಂಬರ್ ೧೯೯೪ರಂದು ಅಂತರರಾಷ್ಟ್ರೀಯ ಸಂಸ್ಥೆಯೊಂದು **'ರೈಟ್ ಲೈವಿಲಿಹುಡ್ ಅವಾರ್ಡ್'**ನೀಡಿ ಗೌರವಿಸಿದೆ.

# ಕೊಳ್ಳೇಗಾಲ ವಲಯದ ಪ್ರವಾಸಿ ತಾಣಗಳು

## ಮರಡಿಗುಡ್ಡ, ಚಿಲಕವಾಡಿ, ಕುಂತೂರು, ಕುರುಬನ ಕಟ್ಟೆ, ಕನಕಗಿರಿ ಕ್ಷೇತ್ರ, ಚಿಕ್ಕಲ್ಲೂರು, ಉಗನಿಯ, ಶಿವನ ಸಮುದ್ರ, ವೆಸ್ಲಿ ಸೇತುವೆ, ಬೂದಬಾಳು ಕ್ಷೇತ್ರ, ಭರಚುಕ್ಕಿ, ಯಡಕುರಿಯ

ತಾಲ್ಲೂಕು ಕೇಂದ್ರದಿಂದ = ೦ ಕಿ.ಮೀ.
ಜಿಲ್ಲಾ ಕೇಂದ್ರದಿಂದ = ೪೦ ಕಿ.ಮೀ.

ಕೊಳ್ಳೇಗಾಲ ವಲಯ ಕರ್ನಾಟಕದ ದಕ್ಷಿಣ ಭಾಗದಲ್ಲಿರುವ ಗಡಿ ತಾಲ್ಲೂಕು, ಪ್ರಕೃತಿ ಸಂಪತ್ತು ಬಹಳಷ್ಟಿದ್ದು ಜಲಪಾತಗಳು, ದೇವಸ್ಥಾನಗಳನ್ನು ಹೊಂದಿದೆ. ವಲಯದ ಸ್ವಲ್ಪಭಾಗ ನೀರಾವರಿ ಹೊಂದಿದೆ. ಈ ಹಿಂದೆ ಈ ಪಟ್ಟಣದಲ್ಲಿ ಕೌಹಳ ಮತ್ತು ಗಾಲವ ಎಂಬ ಇರ್ವರು ಮಹರ್ಷಿಗಳು ನೆಲೆಸಿದ್ದರಿಂದ ಇದು ಮುಂದೆ ಕೌಹಳಗಾಲವ ನಗರವಾಗಿ ಮುಂದೇ ಕೊಳ್ಳೇಗಾಲವೆಂದು ಪ್ರಸಿದ್ಧಿ ಪಡೆಯಿತು.ರೇಷ್ಮೆ ಮಾರುಕಟ್ಟೆಯನ್ನು ರೇಷ್ಮೆ ಬೆಳೆಗಾರರಿಗೆ ವರದಾನವಾಗಿದೆ.

ಕೊಳ್ಳೇಗಾಲದ ಚಾರಿತ್ರಿಕ ಮುಖವನ್ನು ಅವಲೋಕಿಸಿದರೆ ಜನಪದ ನಾಯಕರಾಗಿ ಜನಮಾನಸದಲ್ಲಿ ಶಾಶ್ವತವಾಗಿ ನೆಲೆಸಿರುವ ಸತ್ ಸಂಕಲ್ಪಗಳಿಗೆ ಸದಾ ಪ್ರೇರಣೆ ನೀಡುತ್ತಿರುವ ಮಲೆಯ ಮಹದೇಶ್ವರ, ಮಂಟೇಸ್ವಾಮಿ, ರಾಚಪ್ಪಾಜಿಯಂತಹ ಜಂಗಮ ಶ್ರೇಷ್ಠರು ನಡೆದಾಡಿದ ಪುಣ್ಯಭೂಮಿ.

ನಾಡಿನ ಹಿರಿಯ ಕವಿ ಷಟ್ ಶಾಸ್ತ್ರ ಕೋವಿದ ಶ್ರೀ ನಿಜಗುಣಶಿವಯೋಗಿ ನಂತರದ ಶ್ರೀ ಕುಮಾರ ನಿಜಗುಣಸ್ವಾಮಿ ಹಾಗೂ ಡಾ. ರಾಜ್‌ಕುಮಾರ್ ಸಿಂಗಾನಲ್ಲೂರಿನವರಾಗಿದ್ದು ಇವರೆಲ್ಲರಿಂದ ಸಾಂಸ್ಕೃತಿಕವಾಗಿ ಶ್ರೀಮಂತಗೊಂಡ ಪ್ರದೇಶವಾಗಿದೆ.

**ಮರಡಿಗುಡ್ಡ:**



ಪವಾಡ ಪುರುಷ ಶ್ರೀ ಮಹದೇಶ್ವರರು ಮಂಡಿ ಊರಿದ ಸ್ಥಳ ಮರಡಿಗುಡ್ಡವಾಗಿದೆ.

**ಬಸ್ತೀಪುರ :** ಪಟ್ಟಣದ ಉತ್ತರ ದಿಕ್ಕಿನಲ್ಲಿದ್ದು, ಜೈನ ಬಸದಿಗಳಿದ್ದ ಪುರಾವೆಗಳಿವೆ.

**ಇತರೆ ಸ್ಥಳಗಳು :** ಶ್ರೀ ಸುಬ್ರಮಣ್ಯೇಶ್ವರ ಸ್ವಾಮಿ ದೇವಸ್ಥಾನ, ಮಾಳಿಗೆ ಮಾರಮ್ಮ, ಸೋಮೇಶ್ವರ ಸ್ವಾಮಿ ದೇವಸ್ಥಾನ, ಚೌಡೇಶ್ವರಿ ದೇವಸ್ಥಾನ, ಮುರುಡೇಶ್ವರ ಸ್ವಾಮಿ ದೇವಸ್ಥಾನ, ಕನ್ನಿಕಾ ಪರಮೇಶ್ವರಿ ದೇವಸ್ಥಾನ, ಉಚ್ಚಾಲಮ್ಮ ದೇವಸ್ಥಾನ, ಮಕ್ಕಳ ಮಹದೇಶ್ವರ ದೇವಸ್ಥಾನ, ನಾರಾಯಣ ಸ್ವಾಮಿ ದೇವಸ್ಥಾನ ಹಾಗೂ ಕಲ್ಯಾಣಿ.

**ಚಿಲಕವಾಡಿ**

ತಾಲ್ಲೂಕು ಕೇಂದ್ರದಿಂದ = ೧೨ ಕಿ.ಮೀ.
ಜಿಲ್ಲಾ ಕೇಂದ್ರದಿಂದ = ೫೨ ಕಿ.ಮೀ.



ಇದೊಂದು ಧಾರ್ಮಿಕ ಹಾಗೂ ಕವಿಗಳ ಊರು. ಇಲ್ಲಿ ಶ್ರೀ ಶಂಭುಲಿಂಗೇಶ್ವರರ ಬೆಟ್ಟವಿದ್ದು, ದುರ್ಗಾಂಭ ದೇವಿಯ ದೇವಸ್ಥಾನ ಕೂಡ ಇದೆ. ದೀಪಾವಳಿಯ ಸಂದರ್ಭದಲ್ಲಿ ವರ್ಷಕ್ಕೊಮ್ಮೆ ಸ್ವಾಮಿಯ ಉತ್ಸವ ನಡೆಯುತ್ತಿದ್ದು, ಜಾತ್ರೆ ಕೂಡ ಏರ್ಪಾಡಾಗುತ್ತದೆ.

ದೇವಸ್ಥಾನದ ಸಮೀಪದಲ್ಲಿ ಅನುಭವ ಮಂಟಪ ಇದ್ದು, ಕುಮಾರ ನಿಜಗುಣ ಸ್ವಾಮಿಗಳವರು ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸುತ್ತಾರೆ. ಇವರು ಬರೆದ 'ಬೋಳು ಬಸವನ ಬೊಂತೆ" ಒಂದು ಅಮರ ಕೃತಿ. ಇವರು ಸಂಸಾರಿಕ ಜೀವನವನ್ನು ತ್ಯಜಿಸಿ, ಶ್ರೀ ಸಿದ್ಧಗಂಗೆಯ ಡಾ. ಶಿವಕುಮಾರ್ ಸ್ವಾಮೀಜಿಗಳವರಿಂದ ದೀಕ್ಷೆಯನ್ನು ಪಡೆದು ವಿರಕ್ತಿ ಮಾರ್ಗದೆಡೆಗೆ ನಡೆದಿದ್ದಾರೆ. ಈ ಸ್ಥಳದಲ್ಲಿ ಶ್ರೀ ನಿಜಗುಣಶಿವಯೋಗಿಗಳು ತಪೋಗೈದ ಗುಹೆ ಇದೆ.

**ಕುಂತೂರು**

ತಾಲ್ಲೂಕು ಕೇಂದ್ರದಿಂದ = ೧೦ ಕಿ.ಮೀ.
ಜಿಲ್ಲಾ ಕೇಂದ್ರದಿಂದ = ೫೦ ಕಿ.ಮೀ. ಕುಂತೂರು



ಈ ಗ್ರಾಮದಲ್ಲಿ ಶ್ರೀ ಪ್ರಭುದೇವಸ್ವಾಮಿಯವರ ಬೆಟ್ಟ ಇದ್ದು, ವರ್ಷಕ್ಕೊಮ್ಮೆ ಸ್ವಾಮಿಗೆ ಹಾಲರವೆ ಉತ್ಸವ ಹಾಗೂ ಜಾತ್ರೆ ನಡೆಯುತ್ತದೆ.

ಬೆಟ್ಟದ ತಪ್ಪಲಿನ ಪರಿಸರದಲ್ಲಿ ಶ್ರೀ ಮಹದೇಶ್ವರ ಸಹಕಾರ ಸಕ್ಕರೆ ಕಾರ್ಖಾನೆ ಇದ್ದು, ಈವಾಗ ಶ್ರೀ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ಹೆಸರಿನಲ್ಲಿ ಸುತ್ತಮುತ್ತಲಿನ ಕಬ್ಬು ಬೆಳೆಗಾರರಿಗೆ ವರದಾನವಾಗಿದೆ. ಇಲ್ಲಿ ಕಾರ್ಖಾನೆಯ ನೌಕರರಿಗೆ ವಸತಿಗೃಹಗಳಿದ್ದು, ಕಾಲೋನಿಯೊಂದು ನಿರ್ಮಾಣಗೊಂಡಿದೆ.

ಊರಿನ ಕೇಂದ್ರಸ್ಥಳದಲ್ಲಿ ದಾಸೋಹ ಮಠವಿದ್ದು, ಈ ಮಠದಲ್ಲಿ ಹಿಂದೆ ಪುರುಷ ಶ್ರೀ ಮಾದೇಶ್ವರರವರು ಬಂದು ಹೋಗಿದ್ದ ಐತಿಹ್ಯವಿದೆ. ಶ್ರೀ ಮಠದಲ್ಲಿ ಅನ್ನದಾಸೋಹ ನಡೆಯುತ್ತದೆ.

**ಹೊಂಡರಬಾಳು ಶ್ರೀ ಸಿದ್ಧೇಶ್ವರ ಕ್ಷೇತ್ರ**

ತಾಲ್ಲೂಕು ಕೇಂದ್ರದಿಂದ = ೩ ಕಿ.ಮೀ.
ಜಿಲ್ಲಾ ಕೇಂದ್ರದಿಂದ = ೪೩ ಕಿ.ಮೀ.

ಹೊಂಡರಬಾಳು ಶ್ರೀ ಸಿದ್ಧೇಶ್ವರ ಕ್ಷೇತ್ರವು ಪುರಾಣ ಪ್ರಸಿದ್ಧವಾದ ಸ್ಥಳವಾಗಿದೆ. ಗಿರಿಯಲ್ಲಿ ಗುಹೆಗಳು ಅಧಿಕವಾಗಿವೆ. ತುಟ್ಟತುದಿಯಲ್ಲಿರುವ ಮೊದಲ ಗುಹೆ ವಿಶಾಲವಾದುದು. ಪೂಜಾ ಬಾಗಿಲು, ದರ್ಶನ ಬಾಗಿಲು, ಸ್ವರ್ಗದ ಬಾಗಿಲು ಈ ರೀತಿ ೦೩ ಬಾಗಿಲುಗಳಿವೆ. ಪೂಜೆಯನ್ನು ಭಕ್ತರು ದರ್ಶನದ ಬಾಗಿಲ ಹತ್ತಿರ ಬಂದು ಮಾಡಿಸುತ್ತಾರೆ. ಸ್ವರ್ಗದ ಬಾಗಿಲ ಬಗ್ಗೆ ಒಂದು ದಂತಕಥೆಯಿದ್ದು, ಒಮ್ಮೆ ಮಕ್ಕಳಿಲ್ಲದ ದಂಪತಿಗಳು ಮಗುವಾದರೆ ಅದನ್ನು ಅದರ ಆಭರಣ ಉಡುಪಿನ ಜೊತೆ ನಿನಗರ್ಪಿಸುತ್ತೇವೆಂದು ವಿಚಿತ್ರ ಹರಕೆ ಹೊತ್ತರು. ಮಗುವಾಯಿತು. ಬಹಳ ದಿನಗಳ ನಂತರ ಮಗುವನ್ನು ಸಿಂಗರಿಸಿ ದೇವರ ದರ್ಶನಕ್ಕೆ ಹೋದರು. ಮಗು ಸ್ವರ್ಗದ ಬಾಗಿಲಲ್ಲಿ ಹೋಗಿ ಮತ್ತೆ ಹಿಂತಿರುಗಲಿಲ್ಲ. ಈಗಲೂ ವಿ೩೦μಂ ಸಂದರ್ಭದಲ್ಲಿ ಗುಹೆಯಲ್ಲಿ ಮಗುವಿನ ಗೆಜ್ಜೆಯ ಸದ್ದು ಕೇಳಿಸುವುದೆಂದು ಪ್ರತೀತಿ ಇದೆ.

**ಕುರುಬನ ಕಟ್ಟೆ**

ತಾಲ್ಲೂಕು ಕೇಂದ್ರದಿಂದ  = ೮ ಕಿ.ಮೀ.
ಜಿಲ್ಲಾ ಕೇಂದ್ರದಿಂದ  = ೫೮ ಕಿ.ಮೀ.



ಕೊಳ್ಳೇಗಾಲದ ಪಕ್ಕದಲ್ಲಿರುವ ಕುರುಬನ ಕಟ್ಟೆಯು ಶೀ ಮಂಟೆಸ್ವಾಮಿ ಯವರು ತಪಗೈದ ಸ್ಥಳ. ಇಲ್ಲಿ ಸೋಮವಾರ ಮತ್ತು ಶುಕ್ರವಾರ ವಿಶೇಷ  ಪೂಜೆಗಳು ನಡೆಯುತ್ತದೆ. ಪರಮ ಪರಂಜ್ಯೋತಿ ನೀವೇ ಬನ್ನಿ, ಮಂಟೇದ ಲಿಂಗಯ್ಯ ನೀವೇ ಬನ್ನಿ ಎಂದು ಹಾಡುವ ನೀಲಗಾರರ ಮೇಳ ಈ ಸ್ಥಳದಲ್ಲಿ ಕಾಣಬಹುದು. ಈ ಸ್ಥಳದ ಪಕ್ಕದಲ್ಲಿ ಕರಳಕಟ್ಟೆ ಎಂಬ ಗ್ರಾಮವಿದ್ದು, ಸೋಲಿಗರು ಇಲ್ಲಿ ವಾಸವಾಗಿದ್ದಾರೆ.

**ಕನಕಗಿರಿ ಕ್ಷೇತ್ರ**

ತಾಲ್ಲೂಕು ಕೇಂದ್ರದಿಂದ  = ೯ ಕಿ.ಮೀ.
ಜಿಲ್ಲಾ ಕೇಂದ್ರದಿಂದ  = ೫೯ ಕಿ.ಮೀ.



ಕ್ಷೇತ್ರವು ದೊಡ್ಡಿಂದವಾಡಿ ಗ್ರಾಮದ ಸನಿಹದಲ್ಲಿರುವ ಗಿರಿ ಪ್ರದೇಶ ಇಲ್ಲಿ ಪಾರ್ವತಿ ಮಲ್ಲಿಕಾರ್ಜುನಸ್ವಾಮಿ ದೇವಾಲಯವಿದೆ. ಪಂಚಲಿಂಗ ದರ್ಶನದಂದು ತಲಕಾಡಿನ ೦೫ ಲಿಂಗಗಳನ್ನು ದರ್ಶನ ಮಾಡಿ, ಕನಕಗಿರಿಯ ಪಾರ್ವತಿ-ಪರಮೇಶ್ವರರ ದರ್ಶನ ಪಡೆದರೆ ಕೈಲಾಸ ಪದವಿ ಪ್ರಾಪ್ತವಾಗುವುದೆಂದು ಪ್ರತೀತಿ ಇದೆ. ಆದ್ದರಿಂದಾಗಿ ಈ ದೇವರ ದರ್ಶನ ಪಡೆಯಲು ಭಕ್ತಾದಿಗಳು ಹೆಚ್ಚಾಗಿ ಬರುತ್ತಿದ್ದಾರೆ. ಇದೊಂದು

ವೈದಿಕ ಮತ್ತು ಜಾನಪದ ಸಾಂಸ್ಕೃತಿಕ ಆಚರಣೆಯ ಸಂಗಮ, ಇಲ್ಲಿನ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ ವೈದಿಕ ಪರಂಪರೆಯನ್ನು ಪ್ರತಿನಿಧಿಸಿದರೆ 'ಶ್ರೀ ಗುಡ್ಡದ ಮಾರಮ್ಮನ ದೇವಸ್ಥಾನ ಜಾನಪದ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ. ಇಲ್ಲಿರುವ ಕೆಂಡಗಣ್ಣ ಸ್ವಾಮಿಗಳ ಗದ್ದುಗೆಯೂ ಪ್ರಮುಖವಾದುದಾಗಿದೆ.

**ಗುಂಡಾಲ್ ಜಲಾಶಯ**

ತಾಲ್ಲೂಕು ಕೇಂದ್ರದಿಂದ = ೧೭ ಕಿ.ಮೀ.
ಜಿಲ್ಲಾ ಕೇಂದ್ರದಿಂದ = ೬೭ ಕಿ.ಮೀ.



ಕೊಳ್ಳೇಗಾಲದಿಂದ ಲೊಕ್ಕನ ಹಳ್ಳಿಗೆ ಹೋಗುವ ಮಾರ್ಗ ಮಧ್ಯದಲ್ಲಿ ಎದುರಾಗುವುದೇ ಗುಂಡಲ್ ಅರಣ್ಯ. ಇಲ್ಲಿ ಬೆಟ್ಟ ಗುಡ್ಡಗಳಿವೆ, ಅಡ್ಡಲಾಗಿ ಆಕರ್ಷಕವಾಗಿ ಜಲಾಶಯವನ್ನು ನಿರ್ಮಿಸಲಾಗಿದೆ. ಸುಂದರ ಪರಿಸರ ಬಯಸುವವರಿಗೆ ಇದು ಅಚ್ಚುಮೆಚ್ಚಿನ ತಾಣವಾಗಿದೆ. ವಾಸ್ತವ್ಯಕ್ಕೆ ಪ್ರವಾಸಿ ಬಂಗಲೆಯಿದೆ. ಈ ಜಲಾಶಯದಿಂದ ಇಲ್ಲಿನ ಸುತ್ತಮುತ್ತಲಿನ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

**ಚಿಕ್ಕಲ್ಲೂರು**

ತಾಲ್ಲೂಕು ಕೇಂದ್ರದಿಂದ = ೧೭ ಕಿ.ಮೀ.
ಜಿಲ್ಲಾ ಕೇಂದ್ರದಿಂದ = ೬೭ ಕಿ.ಮೀ.

ಶ್ರೀ ಚಿಕ್ಕಲ್ಲೂರು ಪುಣ್ಯಕ್ಷೇತ್ರವು ಧರೆಗೆ ದೊಡ್ಡವರು ಮಂಟೇಸ್ವಾಮಿಯವರ ಶಿಷ್ಯರಾದ ಸಿದ್ದಪ್ಪಾಜಿಯವರು ಐಕ್ಯವಾದ ಸ್ಥಳವಾಗಿದೆ. ಪವಾಡ ಪುರುಷ ಶ್ರೀ ಸಿದ್ದಪ್ಪಾಜಿಯವರು ನಿಡುಗಟ್ಟ ಗ್ರಾಮದ ಮುದ್ದೋಜಿ ಲಿಂಗವಂತ ಪಂಚಾಳದವರು, ಆತನ ಕಿರಿಯ ಮಗ ಕೆಂಪಣ್ಣ ಮಂಟೇಸ್ವಾಮಿಯ ಶಿಷ್ಯರಾಗಿ ಅನೇಕ ಪವಾಡಗಳನ್ನು ಮೆರೆಸಿ, ಕೊನೆಯಲ್ಲಿ ಚಿಕ್ಕಲ್ಲೂರು ಬಂದು ಐಕ್ಯವಾಗುತ್ತಾರೆ. ಈ ಕ್ಷೇತ್ರದಲ್ಲಿ ಪ್ರತೀ ವರ್ಷ ಜನವರಿ ಮಾಸದಲ್ಲಿ ಬರುವ ಪೌರ್ಣಿಮೆ ದಿನ ಸಂಕ್ರಾಂತಿಯ ಸಮಯದಲ್ಲಿ ಚಂದ್ರಮಂಡಲ ಆರಂಭದಿಂದ ಪಂತಿ ಸೇವೆಯಲ್ಲಿ ಮುಕ್ತಾಯವಾಗುವ ೦೫ ದಿನಗಳ ಜಾತ್ರೆ ನಡೆಯುತ್ತದೆ. ಪ್ರತೀ ಸೋಮವಾರ ಮತ್ತು ಶುಕ್ರವಾರ ವಿಶೇಷ ಪೂಜೆ ನಡೆಯುತ್ತದೆ. ಕಾವೇರಿ ನದಿಯು ಸನಿಹದಲ್ಲಿ ಹರಿಯುತ್ತದೆ. ಸಮೀಪದಲ್ಲಿಯೇ ಮುತ್ತತ್ತಿರಾಯನ ಕ್ಷೇv ಇದೆ.

**ಉಗನಿಯ**

ತಾಲ್ಲೂಕು ಕೇಂದ್ರದಿಂದ = ೧೧ ಕಿ.ಮೀ.
ಜಿಲ್ಲಾ ಕೇಂದ್ರದಿಂದ = ೫೧ ಕಿ.ಮೀ.



**ವಾಸವಾಡಿ ಶ್ರೀ ವೀರಭದ್ರೇಶ್ವರ ಸ್ವಾಮಿ ಸನ್ನಿಧಿ :** ಕೊಳ್ಳೇಗಾಲದಿಂದ ಬೆಂಗಳೂರು ರಸ್ತೆಯಲ್ಲಿ ಕ್ರಮಿಸಿ ಧನಗೆರೆ ಊರಿನಿಂದ ಸ್ವಲ್ಪದೂರ ಮುಂದೆ ಹೋದಾಗ ಒಂದು ಕಚ್ಚಾ ರಸ್ತೆಯ ಮೂಲಕ ತಲುಪಿದಾಗ ಸಿಗುವ ಭವ್ಯ ದೇವಾಲಯ ಶ್ರೀ ವಾಸವಾಡಿ ವೀರಭದ್ರೇಶ್ವರ ಸನ್ನಿದಿ ಹಲವಾರು ಭಕ್ತರ ಸಮೂಹ ಹೊಂದಿರುವ ಅತಿ ಪುರಾತನ ದೇವಾಲಯ ಇದಾಗಿದೆ. ದೇವಾಲಯದಲ್ಲಿ ತಯಾರಿಸಿ ನೀಡುವ ಅನ್ನ ಚಟ್ನಿ ತುಂಬಾ ವಿಶೇಷವಾದ ಪ್ರಸಾದವಾಗಿದೆ. ಪ್ರತಿ ವರ್ಷ ಮಹಾಶಿವರಾತ್ರಿಯಂದು ಅನ್ನಬ್ರಹ್ಮೋತ್ಸವವ ನಡೆಯಲಿದ್ದು ತುಂಬಾ ಸಂಖ್ಯೆಯ ಭಕ್ತಾದಿಗಳು ಸೇರಿ ರಾತ್ರಿ ಪೂರ್ತಿ ಜಾಗರಣೆ ಮಾಡುತ್ತಾರೆ. ದೇವಾಲಯದ ಪಕ್ಕದಲ್ಲಿ ಕೆರೆ ಇದ್ದು ಸುತ್ತಲಿನ ಪರಿಸರ ಸುಂದರ ಹಾಗೂ ಆಕರ್ಷಣೀಯವಾಗಿದೆ.

**ಶಿವನ ಸಮುದ್ರ**

ತಾಲ್ಲೂಕು ಕೇಂದ್ರದಿಂದ = ೧೮ ಕಿ.ಮೀ.
ಜಿಲ್ಲಾ ಕೇಂದ್ರದಿಂದ = ೫೮ ಕಿ.ಮೀ.



ಕಾವೇರಿ ನದಿ ತೀರದಲ್ಲಿದೆ. ಇಲ್ಲಿನ ವೈಷ್ಣವ, ಶೈವ ಹಾಗೂ ಶಕ್ತಿ ದೇವತೆಗಳಿಗೆ ಸೋಮೇಶ್ವರ ದೇವಾಲಯ ಬಹಳ ಪ್ರಾಚೀನವಾದ ದೇವಾಲಯ. ಇದರ ಸಮೀಪ ಶಕ್ತಿ ದೇವತೆ ಶಿವನ ಸಮುದ್ರ ಮಾರಮ್ಮ ಬಹಳ ಪ್ರಸಿದ್ಧ ದೇವಾಲಯ. ಭಯ- ಭಕ್ತಿಯಿಂದ ಜನರು ಇಲ್ಲಿಗೆ ಬಂದು, ಹೊತ್ತ ಹರಕೆಯನ್ನು ತೀರಿಸುವ ವಾಡಿಕೆ ಇಂದಿಗೂ ಕಂಡು ಬರುತ್ತದೆ.

ವೈಷ್ಣವ ದೇವಾಲಯವಾದ ವೆಂಕಟರಮಣ ಸ್ವಾಮಿ ದೇವಸ್ಥಾನ ಬಹಳ ವಿಶಾಲವಾದುದು. ಶಯನ ಭಂಗಿಯಲ್ಲಿರುವ ವಿಷ್ಣುವಿನ ಮೂರ್ತಿ ಇದೆ. ಇದಕ್ಕೆ ಮಧ್ಯರಂಗ ಎಂಬ ಹೆಸರಿನಲ್ಲಿ ಪ್ರಸಿದ್ಧಿ ಹೊಂದಿದೆ. ಶ್ರೀರಂಗಪಟ್ಟಣದ ಆದಿರಂಗ, ಶಿವನ ಸಮುದ್ರದ ಮಧ್ಯರಂಗ, ತಮಿಳುನಾಡಿನ ಶ್ರೀರಂಗಂನ ಅಂತ್ಯರಂಗವನ್ನು ಸೂರ್ಯೋದಯದಿಂದ- ಸೂರ್ಯಾಸ್ತದವರೆಗೆ ನೋಡಿದವರಿಗೆ ಪುಣ್ಯ ಬರುತ್ತದೆ ಎಂದು ಪ್ರತೀತಿ ಇದೆ. ಪ್ರತೀ ವರ್ಷ ಜಾತ್ರೆ ಸೇರು  ನಡೆಯುತ್ತದೆ. ಸೋಮೇಶ್ವರ ದೇವಸ್ಥಾನದಲ್ಲಿ ಶ್ರೀಚಕ್ರವಿದೆ.

**ವೆಸ್ಲಿ ಸೇತುವೆ**



ಶಿವನಸಮುದ್ರ ಪ್ರದೇಶದಲ್ಲಿ ಕಾವೇರಿನದಿಗೆ ಅಡ್ಡಲಾಗಿ ೩ ಸೇತುವೆಗಳನ್ನು ನಿರ್ಮಿಸಲಾಗಿದೆ. ಇದರಲ್ಲಿ ವೆಸ್ಲೆ ಸೇತುವೆ ಹಳೆಯಕಾಲದ ಇಂಜಿನಿಯರಿಂಗ್ ಕೌಶಲ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ.

**ಬೂದಬಾಳು ಕ್ಷೇತ್ರ**

ತಾಲ್ಲೂಕು ಕೇಂದ್ರದಿಂದ = ೧೮ ಕಿ.ಮೀ.
ಜಿಲ್ಲಾ ಕೇಂದ್ರದಿಂದ  = ೫೮ ಕಿ.ಮೀ.



**ಬೂದಬಾಳು :** ಕೊಳ್ಳೇಗಾಲ ತಾಲ್ಲೂಕಿನ ಬೂದಬಾಳು ಗ್ರಾಮದಲ್ಲಿ ಗುಡಿಹಟ್ಟಿ ವೆಂಕರಮಣಸ್ವಾಮಿ ಪ್ರಸಿದ್ಧ ದೇವಾಲಯವಿದೆ. ಇದು ಈ ಭಾಗದಲ್ಲಿ ಚಿಕ್ಕ ತಿರುಪತಿ ಎಂದು ಹೆಸರಾಗಿದೆ. ವರ್ಷದಲ್ಲಿ ಒಮ್ಮೆ ಜಾತ್ರೆ ನಡೆಯುತ್ತದೆ. ಇದು ಮೂರು ದಿನಗಳ ಜಾತ್ರೆಯಾಗಿದ್ದು ಮೊದಲ ದಿನ ತೇರು, ಎರಡನೇ ದಿನ ವಧೆ ಅಥವಾ ರಾಕ್ಷಸನ ಸಂಹಾರ. ಮೂರನೇ ದಿನ ವಸಂತೋತ್ಸವ ನಡೆಯುತ್ತದೆ. ತಾಲ್ಲೂಕಿನ, ಜಿಲ್ಲೆಯ ಹಾಗೂ ರಾಜ್ಯದ ವಿವಿಧ ಕಡೆಗಳಿಂದ ಭಕ್ತಾದಿಗಳು ಇಲ್ಲಿಗೆ ಆಗಮಿಸುತ್ತಾರೆ.

ದರ್ಗ

ತಾಲ್ಲೂಕು ಕೇಂದ್ರದಿಂದ = ೧೦ ಕಿ.ಮೀ.
ಜಿಲ್ಲಾ ಕೇಂದ್ರದಿಂದ = ೮೦ ಕಿ.ಮೀ.



ಮುಸಲ್ಮಾನರ ಪವಿತ್ರ ಮತ್ತು ಧಾರ್ಮಿಕ ಪುಣ್ಯ ಕ್ಷೇತ್ರ. ಭೋರ್ಗರೆದು ಧುಮ್ಮಿಕ್ಕುವ ಕಾವೇರಿ ತಟದಲ್ಲಿದ್ದು, ಗಗನಚುಕ್ಕಿ ಜಲಪಾತವನ್ನು ಉಂಟು ಮಾಡುವ ಸ್ಥಳವಾಗಿದೆ. ಈ ಜಲಾಶಯ ಉಕ್ಕಿ ಹರೆಯುವ ನೀರಿನಿಂದ ರಮ್ಯ ಮನೋಹರವಾಗಿದೆ. ಈ ತಟದಿಂದ ನಿಂತು ನೋಡಿದರೆ ವಿಶ್ವವಿಖ್ಯಾತ ಏಷ್ಯಾ ಖಂಡದ ಪ್ರಪ್ರಥಮ ಜಲ ವಿದ್ಯುತ್ ಸ್ಥಾವರವಾದ ಬ್ಲಫ್‌ನ ಸುಂದರ ನೋಟ ಕಾಣಿಸುತ್ತದೆ. ಈ ದರ್ಗ ಹಿಂದು-ಮುಸಲ್ಮಾನರ ಐಕ್ಯದ ಸಂಕೇತವನ್ನು ಸೂಚಿಸುವ ಸ್ಥಳವಾಗಿದೆ.

**ಭರಚುಕ್ಕಿ**



ಇಲ್ಲಿಂದ ಸ್ವಲ್ಪ ದೂರ ಮುಂದೆ ಹೋದಾಗ ಜಗತ್ತಿನಲ್ಲಿಯೇ ಅಪರೂಪದ ಭೂಸೃಷ್ಟಿಯ ಅಚ್ಚರಿ ಕಾವೇರಿಯ ಆರ್ಭಟ ಭರಚುಕ್ಕಿ ಜಲಪಾತವಿದೆ.

ಇಲ್ಲಿ ಸುಮಾರು ೧ ಕಿ.ಮೀ. ಅಗಲವಾಗಿ ಮೈದೆಳೆದಿರುವ ಕಾವೇರಿ ಸುಮಾರು ೭೫ ರಿಂದ ೧೦೦ ಅಡಿಯವರೆಗೆ ಭೂಮಿಯಿಂದ ಭೂಮಿಗೆ ದುಮ್ಮಿಕ್ಕುವಳು.

ಭರಚುಕ್ಕಿ ಮತ್ತು ಗಗನಚುಕ್ಕಿ ಜಲಪಾತ ವಿಶ್ವದ ಜಲಪಾತಗಳಲ್ಲಿ ೮೩ನೇ ಸ್ಥಾನವನ್ನು ಪಡೆದಿದೆ.

**ಯಡಕುರಿಯ**

ತಾಲ್ಲೂಕು ಕೇಂದ್ರದಿಂದ = ೧೪ ಕಿ.ಮೀ.
ಜಿಲ್ಲಾ ಕೇಂದ್ರದಿಂದ = ೫೪ ಕಿ.ಮೀ.



ಚಾಮರಾಜನಗರ ಜಿಲ್ಲೆಯ ಏಕೈಕ ದ್ವೀಪ ಸ್ಥಳ. ಕಾವೇರಿ ನದಿಯು ತಲ ಕಾವೇರಿಯಲ್ಲಿ ಉಗಮವಾಗಿ ತಾನು ಹರಿಯುವ ಉದ್ದಕ್ಕೂ ವೈಚಿತ್ರಗಳನ್ನು ಸೃಷ್ಟಿಮಾಡುತ್ತದೆ. ಇಂತಹ ವೈಚಿತ್ರ್ಯಗಳಲ್ಲಿ ಯಡಕುರಿಯ ಕೂಡ ಒಂದು. ಇಲ್ಲಿ ಕಾವೇರಿ ನದಿ ಕವಲೊಡೆದು ಎರಡು ಭಾಗಗಳಾಗಿ ಮುಂದೆ ಮತ್ತೆ ಒಂದಾಗಿ ಸೇರುತ್ತದೆ. ಈ ಒಂದಾಗಿ ಸೇರುವ ಸ್ಥಳಕ್ಕೆ ಕೂಡುಮೂಲೆ ಎಂದು ಅಲ್ಲಿನ ಜನರು ಕರೆಯುತ್ತಾರೆ. ಯಡಕುರಿಯ ಸುತ್ತಲೂ ನೀರಿನಿಂದ ಸುತ್ತುವರಿದ ದ್ವೀಪ ಊರು. ಊರಿಗೆ ಹೋಗಲು ಹರಿಗೋಲೆ ಬೇಕು. ಅಂಬಿಗಣ್ಣನ ಅಪ್ಪಣೆ ಇಲ್ಲದೆ ಊರಿಗೆ ಪ್ರವೇಶವಿಲ್ಲ. ಇಲ್ಲಿಗೆ ವಿಶೇಷವಾಗಿ ಪಕ್ಷಿಗಳು ವಲಸೆ ಬರುವುದನ್ನು ಕಾಣಬಹುದು.

# ಹನೂರು ಶೈಕ್ಷಣಿಕ ವಲಯ ಪ್ರವಾಸಿ ತಾಣಗಳು

## ಮಹದೇಶ್ವರ ಬೆಟ್ಟ, ನಾಗಮಲೆ, ಹೊಗೇನಕಲ್ಲು ಜಲಪಾತ, ಪಾಲ್‌ಮಡು, ಬಂಡಳ್ಳಿಬೆಟ್ಟ, ಮೇಕೆದಾಟು, ಟಿಬೆಟ್ ಕ್ಯಾಂಪ್, ಶ್ರವಣ ಬೆಟ್ಟ, ಉಡುತೊರೆ ಜಲಾಶಯ

ಗಿರಿ, ತೊರೆ, ನದಿಗಳಿಂದ ಕೂಡಿದ ವಿಶೇಷ 'ಪ್ರಕೃತಿ-ಪ್ರಾಣಿ' ಸಂಪತ್ತಿನಿಂದ ಕಂಗೊಳಿಸುವ, ಜೀವವೈವಿಧ್ಯಗಳ ಕಣಜವೆನಿಸಿದ. ಆದಿವಾಸಿಗಳ ತವರೂರು, ನಿಸರ್ಗದೈಸಿರಿಯ ಗಡಿನಾಡೆನಿಸಿದ ಜಾನಪದ ಐಸಿರಿಯ ಶೈಕ್ಷಣಿಕ ತಾಲ್ಲೂಕು ಎನಿಸಿದ ಹನೂರು ಶೈಕ್ಷಣಿಕ ವಲಯ, ತನ್ನೊಳಗೆ ಅದೆಷ್ಟೊ ಪ್ರಕೃತಿಯ ರಹಸ್ಯಗಳನ್ನು ಮೈಗೂಡಿಸಿಕೊಂಡಿದೆ.

ಜನಪದ ಕಣಜವಾದ ಈ ಶೈಕ್ಷಣಿಕ ವಲಯದಲ್ಲಿ ತೋಡಿದಷ್ಟು ಜನಪದ ಗೀತೆಗಳು, ಮೊಗೆದಷ್ಟು ಜನಪದ ರಾಗಗಳು, ಬಾಚಿಕೊಡಷ್ಟು ಜನಪದ ಕಲೆಗಳು ಹೇರಳವಾಗಿವೆ. ಮಹದೇಶ್ವರ ಬೆಟ್ಟದಲ್ಲಿ ನಮ್ಮ ಘನ ಸರ್ಕಾರ 'ಜಾನಪದ ಅಧ್ಯಯನ ಕೇಂದ್ರ' ಸ್ಥಾಪನೆಗೆ ಬೃಹತ್ ಯೋಜನೆ ರೂಪಿಸುತ್ತಿರುವುದು ಈ ವಿಚಾರಕ್ಕೆ ಮತ್ತಷ್ಟು ಪುಷ್ಠಿಯನ್ನು ನೀಡುತ್ತದೆ.

ಇಲ್ಲಿನ ಕಪ್ಪುಶಿಲೆ ವಿಶ್ವವಿಖ್ಯಾತವೆನಿಸಿದೆ. ಮಹದೇಶ್ವರ ಬೆಟ್ಟವೂ ಸೇರಿದಂತೆ ನೂರಾರು ಬೆಟ್ಟಗಳನ್ನು, ಸಹಸ್ರಾರು ದುರ್ಗವು ಗಿರಿ ಕಣಿವೆಗಳನ್ನು, ಹತ್ತಾರು ಪವಾಡ ಪುರುಷರನ್ನು ಹಲವಾರು, ವನ್ಯಧಾಮಗಳನ್ನು, ಲೆಕ್ಕವಿಲ್ಲದಷ್ಟು ಪ್ರಾಣಿ-ಪಕ್ಷಿ' ಸಂಕುಲಗಳನ್ನು ವಿವಿಧ ಬಗೆಯ 'ಸಸ್ಯ-ಶ್ಯಾಮಲೆ'ಗಳನ್ನು ಗರ್ಭೀಕರಿಸಿಕೊಂಡು ರಾಜ್ಯದಲ್ಲಿ ವಿಶಿಷ್ಟ ಸ್ಥಾನವೆನಿಸಿದೆ.

ಪುಟ್ಟ ನೇಪಾಳದಂತಿರುವ ಟಿಬೆಟ್ ಕ್ಯಾಂಪ್ ಇರುವ ಒಡೆಯರ-ಪಾಳ್ಯ, ಚಿರಾಂಪುಂಜಿಯ ಅನ್ವರ್ಥವೆನಿಸಿದ ಹೊನ್ನಮೇಟಿ, ತಾಲ್ಲೂಕಿನ ಸಿಮ್ಲಾವೆನಿಸಿದ ಬೇಡಗುಳಿ, ಟಿಪ್ಪುವಿನ ನೆನಪುಗಳನ್ನು ಸಾರುವ ಬಂಡಳ್ಳಿ ಬೆಟ್ಟ, ಮೇಕೆಯು ದಾಟಬಹುದಾದ ಕಿರಿದಾದ 'ಮೇಕೆದಾಟು' ಕಣಿವೆ. ಗಗನದೆತ್ತರಕ್ಕೆ ಹೊಗೆಯಂತೆ ಹಾರಿ ಹೊಗೇನಕಲ್ ಎಂದು ಹೆಸರು ಪಡೆದಿರುವ ಹೊಗೇನಕಲ್ ಪಾಲ್ಸ್, ಈ ಎಲ್ಲವೂ ಇರುವ ಪುಟ್ಟ ವೈವಿಧ್ಯಭಾರತ ಈ ಹನೂರು ಶೈಕ್ಷಣಿಕ ವಲಯವೆನಿಸಿದೆ.

**ಮಹದೇಶ್ವರ ಬೆಟ್ಟ**

ಜಿಲ್ಲೆ : ೧೧೦ ಕಿ.ಮೀ.

ತಾಲ್ಲೂಕು : ೭೫ ಕಿ.ಮೀ.



ಫಿನ್‌ಲ್ಯಾಂಡಿನ ‘ಕಲೇವಾಲ’ ಕಾವ್ಯವನ್ನು ಬಿಟ್ಟರೆ ಇಡೀ ಜಗತ್ತಿನಲ್ಲಿ ಕಾಣಸಿಗುವ ಮತ್ತೊಂದು ಬೃಹತ್ ಮೌಖಿಕ ಮಹಾಕಾವ್ಯವೆಂದರೆ ಅದು ಮಹದೇಶ್ವರರ ಜನಪದ ಕಾವ್ಯ.
ಬೆಟ್ಟದ ಸುತ್ತಲೂ ದಟ್ಟ ಕಾನನದ ಹಸಿರಿನಿಂದ ಕಂಗೊಳಿಸುವ ಪ್ರಕೃತಿಯ ಮಡಿಲೊಟ್ಟಿಗೆ ಜೀವ ವೈವಿಧ್ಯಗಳಿಂದ ಕೂಡಿದ ನಿಸರ್ಗ ವೈಭವವಿರುವ ಇಲ್ಲಿ ೭೭ ಮಲೆಗಳ ನಡುವೆ ಮುದ್ದು ಮಾದಪ್ಪನ ಪವಾಡಗಳು ನಮ್ಮನ್ನು ವಿಸ್ಮಯಗೊಳಿಸುವುದಲ್ಲದೆ, ಇವರ ತಪೋಭೂಮಿಯಾದ ಸಾಲೂರು ಮಠ ಭಕ್ತರನ್ನು ಮಂತ್ರಮುಗ್ಧರನ್ನಾಗಿಸುತ್ತದೆ.

ಪ್ರವಾಸಿಗರ ವಾಸ್ತವ್ಯಕ್ಕಾಗಿ ಹಲವಾರು ವಸತಿಗೃಹಗಳ ಜೊತೆಗೆ, ಸಾಮೂಹಿಕವಾಗಿ ತಂಗಲು ದೇವಾಲಯದ ಬಿಲ್ಲಯ್ಯ, ಕಾರಯ್ಯ, ಶಂಕಮ್ಮ ನಿಲಯಗಳು ನಿರ್ಮಾಣಗೊಂಡಿವೆ.
“ಇದು ಪ್ರಕೃತಿ ಆರಾಧಕರಿಗೆ ಪ್ರೇಕ್ಷಣೀಯ ಸ್ಥಳ, ದೈವಾದಾಧಕರಿಗೆ ಪವಿತ್ರ ಸ್ಥಳ, ಪ್ರಾಣಿ ಪ್ರಿಯರಿಗೆ ವನ್ಯಧಾಮ, ಸಾಹಸಿಗರಿಗೆ ಚಾರಣಕ್ಕಾಗಿರುವ ಗಿರಿನಾಡು, ಹಸಿದವರಿಗೆ ಒಡಲು ತುಂಬುವ ಅನ್ನದಾಸೋಹ”

**ನಾಗಮಲೆ**

ಜಿಲ್ಲೆ : ೧೨೨ ಕಿ.ಮೀ.
ತಾಲ್ಲೂಕು : ೮೦ ಕಿ.ಮೀ.



ಇದು ಮಹದೇಶ್ವರ ಬೆಟ್ಟದ ಬೆಟ್ಟಸಾಲುಗಳಲ್ಲಿ ಬರುವ ೭೭ ಮಲೆಗಳಲ್ಲಿ ನಡು ಮಲೆಗೆ ಪೂರ್ವ ದಿಕ್ಕಿನಲ್ಲಿ ಗೋಪಿನಾಥ ಗ್ರಾಮಕ್ಕೆ ಹೊರಡುವ ದಾರಿಯಿಂದ ೧೨ ಕಿ.ಮೀ. ದೂರದಲ್ಲಿದೆ. ಇಲ್ಲಿಗೆ ನಡೆದೇ ಹೋಗಬೇಕು. ವಾಹನಗಳು ಹೋಗಲು ಸಾಧ್ಯವಿಲ್ಲ. ಇಲ್ಲಿಗೆ ಹೋಗಬೇಕಾದರೆ ನಾಲ್ಕೈದು ಗುಡ್ಡಗಳನ್ನು ಏರಿ ಇಳಿಯಬೇಕು. ಮಾರ್ಗ ಮಧ್ಯೆ ಗಿರಿವಾಸಿ ಗ್ರಾಮಗಳಾದ ಹಳೆಯೂರು, ಇಂಡಿಗನತ್ತ ಗ್ರಾಮಗಳನ್ನು ಬಿಟ್ಟ ನಂತರ ಕಂಡು ಬರುವುದೇ 'ನಾಗಮಲೆ' ಗಿರಿಯಾಗಿದೆ.

ಇಲ್ಲಿನ ವೈಶಿಷ್ಟ್ಯವೆಂದರೆ ಮಾದಪ್ಪರವರ ತಪೋ ಕುರುಹಾಗಿ ಬೃಹತ್ ಬಂಡೆಯೊಂದು ಲಿಂಗಾಕಾರವನ್ನು ಹೊಂದಿದ್ದರೆ, ಮತ್ತೊಂದು ಹೆಬ್ಬಂಡೆ ಸರ್ಪಾಕಾರವಾಗಿ ಹೆಡೆಬಿಟ್ಟು ಲಿಂಗಕ್ಕೆ ನೆರಳು ನೀಡಿದಂತಿದೆ.

ಇದು ಸಂಶೋಧಕರು, ದೈವಭಕ್ತರು, ಪ್ರಾಣಿಪ್ರಿಯರು, ನಿಸರ್ಗ, ಪ್ರೇಮಿಗಳು ಮತ್ತು ಚಾರಣಪ್ರಿಯರಿಗೆ ಸೂಕ್ತವೆನಿಸಿದ ಸ್ಥಳವಾಗಿದೆ.

**ಹೊಗೇನಕಲ್ಲು ಜಲಪಾತ**

ಜಿಲ್ಲೆ : ೧೫೦ ಕಿ.ಮೀ.
ತಾಲ್ಲೂಕು : ೧೧೦ ಕಿ.ಮೀ.



'ದಕ್ಷಿಣ ಭಾರತದ ನಯಾಗರ' ಎಂದು ಹೆಸರು ಪಡೆದ 'ಹೊಗೇನಕಲ್' ಜಲಪಾತ ನೋಡುಗರಿಗೆ ಸ್ವರ್ಗ. ಮಹದೇಶ್ವರ ಬೆಟ್ಟದಿಂದ ತಮಿಳುನಾಡು ಕಡೆಗೆ ಹೋಗುವ ಪಾಲಾರ್ ಸೇತುವೆ ಹತ್ತಿರದಲ್ಲಿ ಎಡಕ್ಕೆ ತಿರುಗಿ ೫ ರಿಂದ ೬ ಕಿ.ಮೀ. ದೂರ ಕ್ರಮಿಸಿದರೆ, ನರಹಂತಕ ಕಾಡುಗಳ್ಳ ವೀರಪ್ಪನ್ ಜನಿಸಿದ ಗೋಪಿನಾಥ ಗ್ರಾಮ ಸಿಗುತ್ತದೆ. ಇಲ್ಲಿಂದ ೩ ರಿಂದ ೪ ಕಿ.ಮೀ. ದೂರ ಕ್ರಮಿಸಿದರೆ ಕಾವೇರಿ ನದಿ ಇಬ್ಭಾಗವಾಗಿ ಹರಿದು 'ಬೆಟ್ಟ- ಗುಡ್ಡ'ಗಳಲ್ಲಿ ದುಮ್ಮಿಕ್ಕಿ ಮುನ್ನುಗ್ಗುವ ವಿಶಾಲವಾದ ಜಲಪಾತಗಳ ರಾಶಿಯೇ ಸಿಗುತ್ತದೆ.

ಇದೇ ಹೊಗೇನಕಲ್.

ನದಿಯು ೩೦ಕ್ಕೂ ಹೆಚ್ಚು ಜಲಧಾರೆಗಳಾಗಿ ಒಮ್ಮೆಗೆ ಭೋರ್ಗರೆದು ದುಮ್ಮಿಕ್ಕುವಾಗ ನೀರಿನ ರಭಸಕ್ಕೆ ಬಂಡೆಗಳ ಸುತ್ತಲೂ ಗಗನದೆತ್ತರದ ಹೊಗೆಯೇಳುವುದರಿಂದ ಇದಕ್ಕೆ 'ಹೊಗೇನಕಲ್' ಎಂಬ ಹೆಸರಿದೆ.

ತೆಪ್ಪಗಳಲ್ಲಿ ಕುಳಿತು ಜಲಪಾತದ ವೈಭವವನ್ನು ಸವಿಯಬಹುದಾದ ಇದು, ''ಜಲಪ್ರಿಯರ ಜಲಕಾಶಿ ಗಿರಿಪ್ರಿಯರ ಗಿರಿಧಾಮ''.

**ಪಾಲ್‌ಮಡು**

ಜಿಲ್ಲೆ : ೧೫೨ ಕಿ.ಮೀ.

ತಾಲ್ಲೂಕು : ೧೧೨ ಕಿ.ಮೀ.

ಹೊಗೇನಕಲ್‌ನಿಂದ ಸುಮಾರು ೨ ಕಿ.ಮೀ. ಕಾಡಿನಲ್ಲಿ ನಡೆದು ಹೋದರೆ 'ಪಾಲ್‌ಮಡು' ಎಂಬ ಸ್ಥಳ ಸಿಗುತ್ತದೆ. ಇಲ್ಲಿ ೩೩ ಜಲಧಾರೆಗಳು ಒಂದೇ ಕಡೆ ದುಮ್ಮಿಕ್ಕಿ ರಭಸದಿಂದ ಬಂಡೆಗಲ್ಲುಗಳಿಂದ ತೂರಿ ಬೀಳುತ್ತವೆ. ಇಲ್ಲಿ ಈಜಲು ಇಳಿದರೆ ತುಂಬಾ ಅಪಾಯವಿದೆ. ಜಾರುವ ಬಂಡೆಗಲ್ಲುಗಳಿರುವ ಇಲ್ಲಿ ಮುನ್ನೆಚ್ಚರಿಕೆ ಅಗತ್ಯ.

ಜಲಧಾರೆಯು ಇಲ್ಲಿ ಹಾಲಿನ ನೊರೆಯಂತೆ ಕಂಗೊಳಿಸುತ್ತಿರುವುದರಿಂದ ಇದಕ್ಕೆ 'ಪಾಲ್‌ಮಡು' ಎಂಬ ಹೆಸರು ಬಂದಿದೆ. ಇಲ್ಲಿಗೆ ಹೋಗುವಾಗ ನೀರಿನ ಬಾಟಲಿಗಳೊಂದಿಗೆ ಊಟ-ತಿಂಡಿ ತೆಗೆದುಕೊಂಡು ಹೋಗುವುದು ಅನಿವಾರ್ಯವೆನಿಸಿದೆ.

ಜುಲೈ ತಿಂಗಳ ನಂತರ ಇಲ್ಲಿಗೆ ಹೊರಟರೆ ಮಳೆಯ ಕಿರಿಕಿರಿಯಿಂದ ತಪ್ಪಿಸಿಕೊಳ್ಳಬಹುದಾಗಿದೆ.

**ಬಂಡಳ್ಳಿಬೆಟ್ಟ**

ಜಿಲ್ಲೆ : ೯೨ ಕಿ.ಮೀ.

ತಾಲ್ಲೂಕು : ೫೨ ಕಿ.ಮೀ.

ಇತಿಹಾಸವನ್ನು ಸಾರುವ ಅದೆಷ್ಟೋ ಕಥೆಗಳನ್ನು ತನ್ನೊಳಗೆ ಇರಿಸಿಕೊಂಡಿರುವ ಬೆಟ್ಟ ಸಾಲಿನಿಂದ ಕೂಡಿರುವ ಪ್ರದೇಶವೇ ಅತ್ಯಂತ ಸುಂದರವಾಗಿ ಕಾಣುವ ಈ ಬೆಟ್ಟವು. ಇತಿಹಾಸದ ಕಣ್ಮುಂದಿನ ಸ್ಮಾರಕಗಳ ತಾಣವೆನಿಸಿದೆ.

ಈ ಬೆಟ್ಟವು ಎತ್ತರವಾಗಿದ್ದು ಇಲ್ಲಿಂದ ಶ್ರೀರಂಗಪಟ್ಟಣಕ್ಕೆ ಸುರಂಗ ಮಾರ್ಗವಿದೆಯೆಂದು ಕಾಲನ ಒತ್ತಡದಲ್ಲಿ ಸಿಲುಕಿ ಇದು ಕುಸಿದು ಮುಚ್ಚಿಹೋಗಿದೆಯೆಂದು ತಿಳಿದು ಬಂದಿದೆಯಲ್ಲದೆ, ಇಲ್ಲಿ ಕಲ್ಲಿನಿಂದ ನಿರ್ಮಾಣ ಮಾಡಿದ ಕೋಟೆಯೊಂದಿದ್ದು ಇದು ಟಿಪ್ಪು ಸುಲ್ತಾನನ ಕಾಲದ್ದೆಂದು ಹೇಳಲಾಗುತ್ತದೆ.

ಇಲ್ಲಿಗೆ ಬಸ್ಸಿನ ಸೌಕರ್ಯವಿರುವುದಿಲ್ಲ. ಸುಮಾರು ೧೨ ಕಿ.ಮೀ. ದೂರ ಕಾಡಿನಲ್ಲಿ ನಡೆದು ಶ್ರಮಿಸಬೇಕಾಗಿದ್ದು ಆ ಕಾಲದಲ್ಲಿ ನಿರ್ಮಿಸಿದ ದೇವಾಲಯವಿದೆ. ಪ್ರಾಣಿಗಳ ಓಡಾಟವು ಹೆಚ್ಚಿರುತ್ತದೆ.

**ಮೇಕೆದಾಟು**

ಜಿಲ್ಲೆ : ೯೨ ಕಿ.ಮೀ.

ತಾಲ್ಲೂಕು : ೫೨ ಕಿ.ಮೀ.



ಹನೂರು ವಲಯದ ಶಾಗ್ಯದ ಹತ್ತಿರದಲ್ಲಿ ಇರುವ ಈ ಪ್ರದೇಶವು ಸುಮಾರು ೧೨ ಕಿ.ಮೀ. ಕಾಡುದಾರಿಯಲ್ಲಿ ಕ್ರಮಿಸಿದ ನಂತರ ಸಿಗುವ ಒಂದು ಉತ್ತಮ ಕಣಿವೆ ಪ್ರದೇಶವೆನಿಸಿದೆ. ಹಲವು ಬೆಟ್ಟಗಳನ್ನು ಏರಿ ಇಳಿದ ನಂತರ ಸಿಗುವ ಈ ಪ್ರದೇಶವು ಕಾವೇರಿ ನದಿಯಿಂದಾಗಿ ನಿರ್ಮಾಣಗೊಂಡುದಾಗಿದೆ.

ಅತೀ ಆಳವಾದ ಕಿರಿದಾದ ಬಂಡೆಗಳ ನಡುವೆ ಹರಿಯುವ ಕಾವೇರಿಯಿಂದ ನಿರ್ಮಾಣವಾದ ಈ ಸ್ಥಳದಲ್ಲಿ ಮೇಕೆಯೊಂದು ಕಣಿವೆಯ ಎರಡೂ ದಂಡೆಗಳಿಗೆ ಹೊಂದಿಕೊಂಡಂತೆ ಕೊಂಡಿಯಾಗಿ ಬೆಳೆದಿದ್ದ ಹಗ್ಗದಂತಿದ್ದ ಹಂಬಿನ ಮೇಲೆ ಮೇಯುತ್ತಾ ಮತ್ತೊಂದು ದಂಡೆಗೆ ಹೋಯಿತೆಂದೂ, ಇದರಿಂದಾಗಿಯೇ ಈ ಸ್ಥಳಕ್ಕೆ ಮೇಕೆದಾಟೆಂದು ಹೆಸರು ಬಂದಿತೆಂದು ತಿಳಿದು ಬಂದಿದೆ. ಇಲ್ಲಿಗೆ ತೆರಳಲು ಅರಣ್ಯ ಇಲಾಖೆಯ ಅನುಮತಿ ಅಗತ್ಯವಿದ್ದು ನಾಲ್ಕು ಚಕ್ರದ ಚಿಕ್ಕ ವಾಹನಗಳಲ್ಲಿ ಹೋಗಬಹುದಾಗಿದೆ. ಈ ನದಿ ಕಣಿವೆಯಿಂದಾಗಿ ಕನಕಪುರ ಮತ್ತು ಕೊಳ್ಳೇಗಾಲ ತಾಲ್ಲೂಕುಗಳು ಗಡಿ ಭಾಗವಾಗಿದೆ.

**ಟಿಬೆಟ್ ಕ್ಯಾಂಪ್**

ಜಿಲ್ಲೆ : ೯೫ ಕಿ.ಮೀ.
ತಾಲ್ಲೂಕು : ೫೫ ಕಿ.ಮೀ.

ಒಡೆಯರ ಪಾಳ್ಯ ಕೊಳ್ಳೇಗಾಲದ ಪೂರ್ವಕ್ಕೆ ಚೆನ್ನಾಲಿಂಗನಹಳ್ಳಿ ಮಾರ್ಗವಾಗಿ ಸುಮಾರು ೫೦ ಕಿ.ಮೀ. 'ಬೆಟ್ಟ-ಗುಡ್ಡ'ಗಳ ಏರುತಗ್ಗು ರಸ್ತೆಯಲ್ಲಿ ಸಾಗಿದಾಗ ಸ್ವರ್ಗದ ಹೆಬ್ಬಾಗಿಲಿನಂತಿರುವ "ಪುಟ್ಟ ನೇಪಾಳ"ವೆನಿಸಿದ ಒಡೆಯಪಾಳ್ಯ ಗ್ರಾಮದಿಂದ ೧೧ ಕಿ.ಮೀ. ದೂರದಲ್ಲಿ ಇರುವ ಈ 'ಟಿಬೆಟ್ ಕ್ಯಾಂಪ್' ಸರ್ವಧರ್ಮಕ್ಕೆ ಕುರುಹೆನಿಸಿದೆ.

ಪೂರ್ವ ಘಟ್ಟದ ಪಶ್ಚಿಮ ಶ್ರೇಣಿಗಳಿಂದ ಸುತ್ತುವರಿದಿರುವ ಈ ಸ್ಥಳವು ಹಲವು ಬಗೆಯ ವನ್ಯ ಜೀವಿಗಳ ಆಶ್ರಯ ತಾಣವೂ ಹೌದು. ಟಿಬೆಟಿಯನ್ನರು ವ್ಯವಸಾಯದ ಜೊತೆ ನೇಯ್ಗೆಯಂತಹ ಕೆಲಸಗಳಿಂದ ಬದುಕು ನಡೆಸುತ್ತಿರುವ ಈ ಸ್ಥಳವು ಅನಿವಾಸಿ ಭಾರತೀಯರೆನಿಸಿದ ಚೀನಾದಿಂದ ಬಂದ ಟಿಬೆಟ್ ಜನರು "ಬದುಕು ಆಚರಣೆ, ಭೌದ್ಧ ಧರ್ಮ"ದ ಬಗ್ಗೆ ಸಾರುತ್ತದೆ. ಇವರ ದೇವಸ್ಥಾನಗಳು ಚಿತ್ತಾಕರ್ಷಕವಾಗಿದ್ದು ಸ್ಮರಣೀಯವೆನಿಸಿದ ಇದು ಪುಟ್ಟ ನೇಪಾಳವು ಹೌದು.

**ಶ್ರವಣ ಬೆಟ್ಟ**

ಜಿಲ್ಲೆ : ೧೦೦ ಕಿ.ಮೀ.
ತಾಲ್ಲೂಕು : ೬೦ ಕಿ.ಮೀ.




ಹನೂರು ಶೈಕ್ಷಣಿಕ ವಲಯದಿಂದ ೪೦ ಕಿ.ಮೀ. ದೂರವಿರುವ ಬೈಲೂರು ಸಮೀಪದ ಶ್ರವಣ ಬೆಟ್ಟ ತನ್ನದೇ ಆದ ಪೌರಾಣಿದ ಐತಿಹ್ಯವುಳ್ಳ ಒಂದು ಸುಂದರ ತಾಣ.


ಬಹಳ ಹಿಂದೆ 'ಶ್ರವಣ' ಎಂಬ ಕ್ರೂರ ರಾಕ್ಷಸನಿದ್ದು ಜನರನ್ನು ಹಿಂಸಿಸುತ್ತಿದ್ದು ಮಹದೇಶ್ವರರು ಜನರ ಅಭೀಪ್ಸೆಯಂತೆ 'ಮಾದಾರಿ'ಯಾಗಿ ಬಂಡೆಯ ಮೇಲೆ ಇವನನ್ನು ಸಂಹರಿಸಿದನೆಂದು ಹೇಳಲಾಗಿದ್ದು ಅದರಿಂದಲೇ ಈ ಸ್ಥಳಕ್ಕೆ 'ಶ್ರವಣ ಬೆಟ್ಟ' ಎಂಬ ಹೆಸರು ಬಂದಿತಂತೆ. ಈಗಲೂ ಸಹ ಈ ಬೆಟ್ಟದಲ್ಲಿ ಇವರೀರ್ವರು ಕಾದಾಡಿದ ಕುರುಹುಗಳಿವೆಯಂತೆ.

ಒಂದು ಕ್ಷಣ ಕಚಗುಳಿಯಿಡುವ ಇಬ್ಬನಿಯ ಹಿಮ ಇಡೀ ಪ್ರದೇಶವನ್ನು ಆವರಿಸಿದರೆ, ಮತ್ತೊಂದು ಕ್ಷಣ ಬೀಸುವ ತಂಗಾಳಿಯು ಆಹ್ಲಾದವನ್ನುಂಟು ಮಾಡಿ ಮೈಮನಗಳಿಗೆ ಮುದ ನೀಡುವ ತಾಣವೆನಿಸಿದೆ.

**ಉಡುತೊರೆ ಜಲಾಶಯ**

ಜಿಲ್ಲೆ : ೭೦ ಕಿ.ಮೀ.
ತಾಲ್ಲೂಕು : ೩೭ ಕಿ.ಮೀ





ಅಜ್ಜೀಪುರ ಸುತ್ತಮುತ್ತಲಿನ ಬೆಟ್ಟಗುಡ್ಡಗಳ ನಡುವೆ ನಿರ್ಮಿತಿಗೊಂಡು ಅರಳಿದ ಸುಂದರ ಜಲಾಶಯವೇ ಉಡುತೊರೆ ಜಲಾಶಯ. ನೆರೆಯ ತಮಿಳ್ನಾಡಿನಿಂದ ಹರಿದು ಬಂದ ಬಹುತೇಕ ನೀರು ಈ ಜಲಾಶಯದ ಒಡಲು ತುಂಬಿ ಆಧಾರವೆನಿಸಿದೆ.

ಇದು ತನ್ನ ಸುತ್ತಮುತ್ತಲಿನ ಸಾವಿರಾರು ಎಕರೆಗೆ ನೀರುಣಿಸಿ ರೈತರಿಗೆ 'ಬಾಳ ಸಂಜೀವಿನಿ'ಯೆನಿಸಿದೆ. ಈ ಜಲಾಶಯದ ವೈಶಿಷ್ಟ್ಯವೆಂದರೆ ಸುಮಾರು ೦೪ ಕಿ.ಮೀ. ಉದ್ದದ 'ತೂಬು ಸೇತುವೆ' ಇದು ಈ ಜಲಾಶಯದ ಅಂದವನ್ನು ನೂರ್ಮಡಿಗೊಳಿಸಿದೆ.

ಮುಂದಿನ ಹಂತದಲ್ಲಿ ಮೀನುಗಾರಿಕೆ, ಉದ್ಯಾನವನಗಳಂತಹ ಮಹತ್ಕಾರ್ಯಗಳ ಯೋಜನೆ ಜಾರಿ ಹಂತದಲ್ಲಿದ್ದು ಇದರ ಜನಪ್ರಿಯತೆ ಇನ್ನೂ ದ್ವಿಗುಣಗೊಳ್ಳಲಿದೆ.

# ಗುಂಡ್ಲುಪೇಟೆ ತಾಲ್ಲೂಕು ಭೌಗೋಳಿಕ ವಿವರಣೆ

ಗುಂಡ್ಲುಪೇಟೆ ತಾಲ್ಲೂಕು ಕರ್ನಾಟಕ ರಾಜ್ಯದ ದಕ್ಷಿಣ ತುತ್ತತುದಿಯಲ್ಲಿರುವ ಗಡಿ ತಾಲ್ಲೂಕು. ಚಾಮರಾಜನಗರ ಜಿಲ್ಲೆಯಿಂದ ೪೦ ಕಿ.ಮೀ. ದೂರದಲ್ಲಿದೆ. ಇದರ ವಿಸ್ತೀರ್ಣ - ೧೪೦೬.೧. ಚ.ಕೀ.ಗಳು. ಒಟ್ಟು ಜನಸಂಖ್ಯೆ - ೨,೧೩.೦೮೨ ಸಾಕ್ಷರತೆಯ ಪ್ರಮಾಣ ಸರಾಸರಿ - ೪೪.೮೮% ನಾಲ್ಕು ಹೋಬಳಿಗಳು ಇವೆ. ತಾಲ್ಲೂಕಿನಿಂದ ಪಶ್ಚಿಮಕ್ಕೆ ಕೇರಳ ರಾಜ್ಯ, ದಕ್ಷಿಣಕ್ಕೆ ತಮಿಳುನಾಡು, ಪೂರ್ವಕ್ಕೆ ಚಾಮರಾಜನಗರ ತಾಲ್ಲೂಕು, ಉತ್ತರಕ್ಕೆ ನಂಜನಗೂಡು ತಾಲ್ಲೂಕು ಹಾಗೂ ಹೆಗ್ಗಡದೇವನ ಕೋಟೆ ತಾಲ್ಲೂಕುಗಳಿವೆ.

ಗುಂಡ್ಲುಪೇಟೆ ಮುಖ್ಯ ಕೇಂದ್ರವಾಗಿದ್ದು, ಬೆಂಗಳೂರು - ನೀಲಗಿರಿ ರಸ್ತೆಯ ಮಧ್ಯದಲ್ಲಿದೆ. ಈ ತಾಲ್ಲೂಕು ಹೆಚ್ಚಾಗಿ ಮೈದಾನ ಪ್ರದೇಶವಿದೆ. ದಕ್ಷಿಣದಲ್ಲಿ ಬಂಡೀಪುರ ಅರಣ್ಯವಿದ್ದು, ಇಲ್ಲಿ ಹರಿಯುವ ಮೇಯರ್ ನದಿ ಗಡಿಯಾಗಿದೆ. ಪಶ್ಚಿಮ ಮತ್ತು ದಕ್ಷಿಣದಲ್ಲಿ ಹಬ್ಬಿರುವ ಬೆಟ್ಟಗಳು ನೀಲಗಿರಿ ಬೆಟ್ಟಗಳ ಸಾಲಿಗೆ ಸೇರಿಕೊಳ್ಳುತ್ತವೆ. ತೆರಕಣಾಂಬಿಯ ಹತ್ತಿರ ಅಡ್ಡಾಣಿ ಬೆಟ್ಟದ ಸಾಲು, ಹುಲಗನ ಮೊರಡಿ, ಸ್ಕಾಂದಗಿರಿ, (ಪಾರ್ವತಿಬೆಟ್ಟ) ಗೋಪಾಲಸ್ವಾಮಿ ಬೆಟ್ಟಗಳು ಕಂಡುಬರುತ್ತವೆ. ಗೋಪಾಲಸ್ವಾಮಿ ಬೆಟ್ಟದಲ್ಲಿ ಕೌಂಡಿನ್ಯ ನದಿ ಹುಟ್ಟಿ ನಂಜನಗೂಡಿನ ಹತ್ತಿರ ಕಪಿಲನದಿಗೆ ಸೇರುತ್ತದೆ.

ಭೂಪ್ರದೇಶವು ಕಪ್ಪು ಮಣ್ಣು, ಕೆಂಪು ಮಣ್ಣು, ಬೂದು ಮಣ್ಣು, ಸುಣ್ಣಕಲ್ಲು ಮಿಶ್ರಿತ ಮಣ್ಣು, ವ್ಯವಸಾಯಕ್ಕೆ ಅನುಕೂಲ. ಸುಣ್ಣದ ಕಲ್ಲು, ಅಮೃತಶಿಲೆ, ಮ್ಯಾಗ್ನಾಸೈಟು, ಕಬ್ಬಿಣದ ಅದಿರು, ನೀಲಮಣಿ, ಕಣಶಿಲೆ, ಪಟ್ಟೆಶಿಲೆ, ಖನಿಜಗಳು ದೊರಕುತ್ತವೆ.

ಜೋಳ, ರಾಗಿ, ಹುರುಳಿ, ಹಲಸಂದೆ, ನೆಲಗಡಲೆ, ಮಳೆ ಆಶ್ರಯದಲ್ಲಿ ಬೆಳೆಯುತ್ತಾರೆ. ಕಬ್ಬು, ಅರಿಶಿಣ, ತೆಂಗು, ಈರುಳ್ಳಿ, ವಾಣಿಜ್ಯ ಬೆಳೆಗಳು.

ಈ ತಾಲ್ಲೂಕಿನಲ್ಲಿ ಇತಿಹಾಸ, ಸಾಂಸ್ಕೃತಿಕ, ಸಾಹಿತ್ಯಗಳ ಮೇಲೆ ಬೆಳಕು ಚೆಲ್ಲುವ ೨೨೪ ಶಾಸನಗಳಿವೆ. ವೀರಗಲ್ಲು ಮತ್ತು ಮಾಸ್ತಿಕಲ್ಲುಗಳಿವೆ. ವೀರಗಾಸೆ, ಕಂಸಾಳೆ, ವೀರಮಕ್ಕಳ ಕುಣಿತ, ಯಕ್ಷಗಾನ, ಮುಂತಾದ ವೈವಿಧ್ಯಮಯವಾದ ಜಾನಪದ ಕಲೆಗಳಿವೆ.

**ಶ್ರೀ ವಿಜಯ ನಾರಾಯಣ ಸ್ವಾಮಿ ದೇವಸ್ಥಾನ, ಗುಂಡ್ಲುಪೇಟೆ**

ಚಾಮರಾಜನಗರದಿಂದ : ೪೦ ಕಿ.ಮೀ.



ಗುಂಡ್ಲುಪೇಟೆಗೆ ೧೦ನೇ ಶತಮಾನದಲ್ಲಿ ಕುಡುಗೂರು, ೧೩ನೇ ಶತಮಾನದಲ್ಲಿ ಪ್ರಸನ್ನ ವಿಜಯಪುರ, ೧೭ನೇ ಶತಮಾನದಲ್ಲಿ "ದೇವನಗಿರಿ ಎಂಬ ಹೆಸರಿದ್ದು, ಈಗ ಗುಂಡ್ಲುಪೇಟೆ ಎಂಬ ಹೆಸರಿದೆ.

ವಿಜಯ ನಾರಾಯಣ ಸ್ವಾಮಿ ದೇವಸ್ಥಾನ ಪಟ್ಟಣದ ಮಧ್ಯದಲ್ಲಿದೆ. ಹೊಯ್ಸಳರ ದೊರೆ ವಿಷ್ಣುವರ್ಧನ ಗರ್ಭ ಗುಡಿಯಲ್ಲಿರುವ ಆರು ಅಡಿ ಎತ್ತರದ ವಿಜಯ ನಾರಾಯಣ ಸ್ವಾಮಿ ವಿಗ್ರಹವನ್ನು ಪ್ರತಿಷ್ಠಾಪಿಸಿದ ಎಂಬ ನಂಬಿಕೆ ಇದೆ. ಕ್ರಿ.ಶ. ೧೫೪೩ರಲ್ಲಿ ಆದಿತ್ಯರವರ ಮಕ್ಕಳು ರುಪ್ಪರಸವೊಡೆಯರು ಈ ದೇವಸ್ಥಾನದ ಘಾಳಿ ಮಂಟಪ ಕಲ್ಪಿಸಿ, ನೈವೇದ್ಯಕ್ಕಾಗಿ ದತ್ತಿ ಬಿಟ್ಟಿದ್ದಾರೆ. ತಲಕಾಡಿನ ವೈದ್ಯೇಶ್ವರ ದೇವಸ್ಥಾನವನ್ನು ಹೋಲುತ್ತದೆ. ಗರ್ಭಗುಡಿಯಲ್ಲಿರುವ ವಿಜಯ ನಾರಾಯಣ ಸ್ವಾಮಿಯ ವಿಗ್ರಹವಿದ್ದು, ಬಲಗೈ ಅಭಯಮುದ್ರೆಯಲ್ಲಿದ್ದು, ತಾವರೆಯನ್ನು ಹಿಡಿದಿದೆ. ಈ ವಿಗ್ರಹವು ಸರ್ಪಾಕಾರದ ತೋರಣದಲ್ಲಿದ್ದು, ಬುದ್ಧಾವತಾರವು ಸೇರಿದಂತೆ, ದಶಾವತಾರದ ವರ್ಣನೆ ಇದೆ. ಕಲ್ಲಿನ ಕಂಬಗಳ ಮೇಲೆ ಸಿಂಹ, ಶರಭಗಳ ಚಿತ್ರವಿದೆ.

**ಲಕ್ಷ್ಮೀ ವರದ ರಾಜಸ್ವಾಮಿ ದೇವಸ್ಥಾನ, ತೆರಕಣಾಂಬಿ**

ಚಾಮರಾಜನಗರದಿಂದ ೨೮ ಕಿ.ಮೀ.
ಗುಂಡ್ಲುಪೇಟೆಯಿಂದ ೧೨ ಕಿ.ಮೀ.



ತೆರಕಣಾಂಬಿಯು ಹಿಂದೆ ಅನೇಕ ರಾಜ ಮನೆತನಗಳ ರಾಜಧಾನಿಯಗಿ ಮೆರೆದ ಪಟ್ಟಣ. ಅರಮನೆ, ಕೋಟೆಗಳಿಂದ ಕೂಡಿತ್ತು. ಹೊಯ್ಸಳರು, ವಿಜಯನಗರದ ಅರಸರು, ಉಮ್ಮತ್ತೂರು ಅರಸರು, ಮೈಸೂರು ಒಡೆಯರು ಆಳಿದ್ದಾರೆ. ಕ್ರಿ. ಶ. ೧೭೭೪ರ ಮರಾಠರ ದಾಳಿಯಿಂದ ಅರಮನೆ, ಕೋಟೆ, ದೇವಾಲಯಗಳು ನಾಶವಾಗಿವೆ.

ಲಕ್ಷ್ಮೀ ವರದರಾಜ ಸ್ವಾಮಿ ದೇವಾಲಯವನ್ನು ಕ್ರಿ.ಶ. ೧೩೦೩ ರಲ್ಲಿ ಪೆರುಮಾಳೆ ದಂಡನಾಥನ ಸುಪುತ್ರ ರಾದ ಮಾಧವ ಡಣಾಯಕ ಮತ್ತು ಕೇತಯ್ಯ ಡಣಾಯಕರು ಕಟ್ಟಿಸಿದ್ದಾರೆ. ಹೊಯ್ಸಳರ ಕಾಲಕ್ಕೆ ಸೇರಿದೆ. ವರದರಾಜ ಸ್ವಾಮಿಯ ದಕ್ಷಿಣಕ್ಕೆ ಕುಳಿತಿರುವ ಭಂಗಿಯಲ್ಲಿ ಒಂದು ಮೀಟರ್ ಎತ್ತರದ ಲಕ್ಷ್ಮೀದೇವಿ ಗುಡಿಯಿದೆ. ಒಳ ಪ್ರದಕ್ಷಣದಲ್ಲಿ ಅನೇಕ ಕಂಬಗಳಿಂದ ಕೂಡಿದ ನವರಂಗ, ಕಲಾಸಾಕಾರದ ಅಲಂಕೃತಗೊಂಡ ಮಹಾದ್ವಾರವಿದೆ. ૩ನೇ ಕೃಷ್ಣರಾಜ ಒಡೆಯರ ಕಾಲದಲ್ಲಿ ರಚನೆಯಾದ ನವರಂಗಿವಿದೆ. ನವರಂಗದ ಒಳಗಡೆ ಶಿವಸ್ವರೂಪಿಯಾದ ಶಿಲ್ಪಗಳಿವೆ.

**ಬಂಡೀಪುರ ರಾಷ್ಟ್ರೀಯ ಉದ್ಯಾನ**

ಚಾಮರಾಜನಗರದಿಂದ ೫೮ ಕಿ.ಮೀ.
ಗುಂಡ್ಲುಪೇಟೆಯಿಂದ ೧೮ ಕಿ.ಮೀ.




ಬೆಂಗಳೂರು - ಉದಕ ಮಂಡಲದ ರಾಜ್ಯ ಹೆದ್ದಾರಿಯಲ್ಲಿ ಈ ಅರಣ್ಯವಿದೆ. ಗುಂಡ್ಲುಪೇಟೆಗೆ ೧೮ ಕಿ.ಮೀ. ದೂರದಲ್ಲಿದೆ. ೧೯೪೧ರಲ್ಲಿ ಮೈಸೂರು ರಾಜ್ಯದಲ್ಲಿ ಸ್ಥಾಪಿತವಾದ ವೇಣುಗೋಪಾಲ ರಾಷ್ಟ್ರೀಯ ಉದ್ಯಾನದ ವಿಸ್ತೀರ್ಣ ೮೭೩ ಚ.ಕಿಮೀ. ಗಳು ತಮಿಳುನಾಡಿನ ಮಧುಮಲೈ, ಕೇರಳದ ವೈನಾಡು ಬಂಡೀಪುರ ಅರಣ್ಯಕ್ಕೆ ಹೊಂದಿಕೊಂಡಿವೆ. ಮೇಯರ್ ನದಿ ಗಡಿರೇಖೆಯಾಗಿ ಹರಿಯುತ್ತದೆ. ಭಾರತ ಸರ್ಕಾರವು ಗುರುತಿಸಿರುವ ಹನ್ನೊಂದು ರಾಷ್ಟ್ರೀಯ ಉದ್ಯಾನ ಗಳಲ್ಲಿ ಬಂಡೀಪುರ ಅರಣ್ಯವು ಒಂದಾಗಿದೆ. ಹುಲಿ ಸಂತತಿಯ ರಕ್ಷಣೆ ಗಾಗಿ ಭಾರತ ಸರ್ಕಾರ ೧೯೭೩ರಲ್ಲಿ "ಹುಲಿ ಸಂರಕ್ಷಣ ಯೋಜನೆ" (ಟೈಗರ್ ಪ್ರಾಜೆಕ್ಟ್) ಜಾರಿಗೆ ತಂದಿದೆ. ಆನೆ, ಚಿರತೆ, ಹುಲಿ, ಕಾಟಿ, ಕಡವೆ, ಜಿಂಕೆ, ಕಾಡು ಹಂದಿ, ಕಾಡುನಾಯಿ, ಪ್ರಾಣಿಗಳು ಕಂಡುಬರುತ್ತವೆ. ನವಿಲು, ಕಾಡುಕೋಳಿ, ಕಾಜಾಣ, ಕೆಂಬೂತ, ಮರಕುಟುಕ, ನೊಣ, ಹಿಡುಕ, ಪಕ್ಷಿಗಳಿವೆ. ತೇಗ, ಬೀಟೆ, ಹೊನ್ನ, ನಂದಿ, ಮತ್ತಿ, ಬಿದಿರು, ಬೆಲೆಬಾಳುವ ಮರಗಳಿವೆ. ಅರಣ್ಯದೊಳಗೆ ಅನೇಕ ಕೆರೆಗಳಿದ್ದು, ಅಲ್ಲಲ್ಲಿ ಉಪ್ಪುನೆಲೆಗಳನ್ನು ನಿರ್ಮಿಸಿದ್ದಾರೆ. ಈ ಸ್ಥಳಗಳಲ್ಲಿ ವೀಕ್ಷಣ ಗೋಪುರಗಳನ್ನು ನಿರ್ಮಿಸಿ, ಪ್ರಾಣಿಗಳ ಚಲನವಲನಗಳನ್ನು ಗಮನಿಸಬಹುದಾಗಿದೆ. ವಸತಿ ಸೌಕರ್ಯವಿದೆ. ಪ್ರವಾಸಿಗರಿಗೆ ಏಪ್ರಿಲ್‌ನಿಂದ ಜೂನ್, ತಿಂಗಳು ಪ್ರಾಶಸ್ತ್ಯವಾದ ಕಾಲವಾಗಿದೆ.

**ಗೋಪಾಲಸ್ವಾಮಿ ಬೆಟ್ಟ**

ಚಾಮರಾಜನಗರದಿಂದ ೬೦ ಕಿ.ಮೀ.

ಗುಂಡ್ಲುಪೇಟೆಯಿಂದ ೨೦ ಕಿ.ಮೀ.



ಈ ಬೆಟ್ಟವು ವರ್ಷದ ಬಹುಕಾಲ ಹಿಮದಿಂದ ಕೂಡಿರುತ್ತದೆ. ಆ ಕಾರಣ ಹಿಮವದ್ ಗೋಪಾಲಸ್ವಾಮಿ ಬೆಟ್ಟ ಎಂಬ ಹೆಸರಿದೆ. ಬೆಟ್ಟಗುಡ್ಡಗಳನ್ನು ಚುಂಬಿಸುವಂತೆ, ಕಂಡುಬರುವ ಮುಗಿಲುಗಳು, ಎತ್ತರವಾದ ಕಾಡುಗಳು, ಪ್ರವಾಸಿಗರ ಮನಸ್ಸನ್ನು ಸೂರೆಗೊಳ್ಳುತ್ತದೆ. ಸಮುದ್ರಮಟ್ಟದಿಂದ ೫೭೭೦ ಅಡಿ ಎತ್ತರವಿದೆ. ಬೇಸಿಗೆಯಲ್ಲಿ ವಾತಾವರಣ ತಂಪಾಗಿರುತ್ತದೆ. ಈ ಬೆಟ್ಟಕ್ಕೆ ಗೋವರ್ಧನಗಿರಿ, ಕಮಲಾಚಲ, ಎಂಬ ಹೆಸರಿದೆ. ತೇಗ, ಬೀಟೆ, ಹೊನ್ನೆ, ಮತ್ತಿಮರಗಳು, ಸುರಗಿಸುರ ಹೊನ್ನೆಸಂಪಿಗೆ ಹೂವಿನ ಮರಗಳು, ಅನೇಕ ಗಿಡ ಮೂಲಿಕೆಗಳು ಕಂಡು ಬರುತ್ತಿವೆ. ಇಲ್ಲಿ ೭೭ ಕೊಳಗಳಿವೆ. ಎಂಬ ಪ್ರತೀತಿ ಇದೆ.

**ಪೌರಾಣಿಕ ಹಿನ್ನಲೆ :** ಅಗಸ್ತ್ಯರು ವಿಂಧ್ಯಪರ್ವತದ ಬೆಳವಣಿಗೆಯನ್ನು ನಿಲ್ಲಿಸಿ, ದಕ್ಷಿಣಕ್ಕೆ ಬಂದು, ಈ ಸ್ಥಳದಲ್ಲಿ ತಪಸ್ಸು ಮಾಡಿದಾಗ, ಗೋಪಾಲಸ್ವಾಮಿ ಪ್ರತ್ಯಕ್ಷನಾಗಿ, ಅವರ ಪ್ರಾರ್ಥನೆಯಂತೆ, ರುಕ್ಮಿಣಿ, ಸತ್ಯಭಾಮೆಯೊಡನೆ ಇಲ್ಲಿ ನೆಲೆಸಿದ್ದಾನೆ.

**ಐತಿಹಾಸಿಕ ಹಿನ್ನಲೆ :** ಕ್ರಿ.ಶ. ೧೩೧೫ರಲ್ಲಿ ತೆರಕಣಾಂಬಿಯ ರಾಜ ಶ್ರೀ ಪೆರುಮಾಳ ಡಣಾಯಕನ ಮಗ ಶ್ರೀ ಮಾಧವ ಡಣಾಯಕ ಗೋಪಾಲಸ್ವಾಮಿ ವಿಗ್ರಹ ಪ್ರತಿಷ್ಠಾಪಿಸಿದ ಎಂಬುದು ಚಾರಿತ್ರಿಕ ದಾಖಲೆಯಾಗಿದೆ.

ಗೋಪಾಲಸ್ವಾಮಿ ಬೆಟ್ಟದ ದೇವಾಲಯ, ಹೊಯ್ಸಳ ಮತ್ತು ವಿಜಯನಗರ ಶಿಲ್ಪಿ ಕಲೆಯನ್ನು ಮೈಗೂಡಿಸಿಕೊಂಡಿದೆ. ಗರ್ಭಗುಡಿ, ನವರಂಗ, ಸುಕನಾಸಿಗಳಿಂದ ಕೂಡಿದೆ. ಗೋಪಾಲಸ್ವಾಮಿ ವಿಗ್ರಹ ೧೧/೨ ಮೀಟರ್ ಎತ್ತರವಿದ್ದು, ಪ್ರಭಾವಳಿಯು ಗಿಡಗಳಿಂದ ಕೂಡಿದೆ. ಮೂರ್ತಿಯ ಸುತ್ತ ರುಕ್ಮಿಣಿ, ಸತ್ಯಭಾಮ, ಗೋಪಾಲಕರು, ಕಾಮಧೇನು ವಿಗ್ರಹಗಳಿವೆ.

**ಹುಲಿಗನ ಮೊರಡಿ ವೆಂಕಟರಮಣ ಸ್ವಾಮಿ ದೇವಸ್ಥಾನ**

ಚಾಮರಾಜನಗರದಿಂದ ೩೫ ಕಿ.ಮೀ.

ಗುಂಡ್ಲುಪೇಟೆಯಿಂದ ೧೬ ಕಿ.ಮೀ.



ಈ ದೇವಸ್ಥಾನವನ್ನು ಕ್ರಿ.ಶ. ೧೪೯೦ರಲ್ಲಿ ತೆರಕಣಾಂಬಿಯ ದಾಸಕೇಶವ ಶೆಟ್ಟಿ ಕಟ್ಟಿಸಿದನು. ಕ್ರಿ.ಶ. ೧೬೭೦ರಲ್ಲಿ ಚಿಕ್ಕದೇವರಾಜರ ಹೆಂಡತಿ ದೊಡ್ಡಮುದ್ದಮ್ಮನವರು ಬೆಟ್ಟದ ಮೇಲೆ ಕೋಟೆ ಕಟ್ಟಿಸಿದ್ದಾರೆ. ಈಗ ದೇವಸ್ಥಾನದ ಮುಂದೆ ರಾಜಗೋಪುರ ನಿರ್ಮಾಣವಾಗಿದೆ.

ಈ ಬೆಟ್ಟಕ್ಕೆ ಶೇಷಾದ್ರಿ, ಕನಕಾದ್ರಿ, ವ್ಯಾಘ್ರಾದಿ ಮತ್ತು ವೆಂಕಟಾದ್ರಿ ಎಂಬ ಹೆಸರುಗಳಿವೆ. ಮಾಂಡ್ಯವ ಋಷಿಯು ತಪಸ್ಸು ಮಾಡಿದಾಗ, ವೆಂಕಟೇಶ್ವರ ಪ್ರತ್ಯಕ್ಷವಾಗಿ, ಅವರ ಪ್ರಾರ್ಥನೆಯಂತೆ, ಶ್ರೀದೇವಿ, ಭೂದೇವಿ ಮತ್ತು ನೀಳಾದೇವಿಯವರೊಡನೆ ಇಲ್ಲಿ ನೆಲೆನಿಂತ ಎಂಬ ಪೌರಾಣಿಕ ಕಥೆ ಇದೆ. ವಿಜಯನಗರದ ಅರಸರು ಕಟ್ಟಿಸಿದ ಶ್ರೀನಿವಾಸ ದೇವಾಲಯದಲ್ಲಿ ಮೂರು ಗರ್ಭಗುಡಿಗಳಿವೆ. ಶ್ರೀನಿವಾಸ ದೇವರ ಗುಡಿ, ಪದ್ಮಾವತಿಗುಡಿ, ಬಲಕ್ಕೆ ಕಂಚಿನ ಉತ್ಸವ ಮೂರ್ತಿ ಇದೆ. ಗರ್ಭಗುಡಿಗೆ ಶಿಖರ ಮತ್ತು ಸುಕಾಸನವಿದೆ. ನವರಂಗದಲ್ಲಿ ಕಂಡುಬರುವ ಸ್ತಂಭಗಳು ವಿಜಯನಗರ ಶೈಲಿಯನ್ನ ಹೋಲುತ್ತವೆ.

**ಪಾರ್ವತಿ ಬೆಟ್ಟ (ಸ್ಕಂದಗಿರಿ)**

ಚಾಮರಾಜನಗರದಿಂದ ೩೮ ಕಿ.ಮೀ.
ಗುಂಡ್ಲುಪೇಟೆಯಿಂದ ೧೦ ಕಿ.ಮೀ.



ಗುಂಡ್ಲುಪೇಟೆಯಿಂದ ೧೦ ಕಿ.ಮೀ. ದೂರದಲ್ಲಿದೆ. ಗುಂಡ್ಲು ಪೇಟೆಯಿಂದ ತೆರಕಣಾಂಬಿಗೆ ಹೋಗುವ ರಸ್ತೆಯಲ್ಲಿ ಶಿಂಡಿನ ಪುರದ ಹತ್ತಿರ ದಕ್ಷಿಣಕ್ಕೆ ೩ ಕಿ.ಮೀ. ಪಯಣಸಿದರೆ ಈ ಬೆಟ್ಟ ಸಿಗುತ್ತದೆ. ಪೌರಾಣಿಕ ಕಥೆ ಈ ರೀತಿ ಇದೆ. ಷಣ್ಮುಖ ಸ್ವಾಮಿಯು ತಾರಕಾಸುರ ನನ್ನು ಸಂಹರಿಸಿ, ಬಳಿಕ ಶಿವನನ್ನು ಕುರಿತು ತಪಸ್ಸು ಮಾಡಿದ ಸ್ಥಳವಾದ್ದರಿಂದ ಇದಕ್ಕೆ 'ಸ್ಕಂದಗಿರಿ' ಎಂಬ ಹೆಸರು ಬಂದಿದೆ. ಸೋಮೇಶ್ವರ ಪ್ರತ್ಯಕ್ಷನಾಗಿ, ಕುಮಾರಸ್ವಾಮಿಯ ಕೋರಿಕೆಯಂತೆ ಪಾರ್ವತಿ ಸಹಿತ ಈ ಬೆಟ್ಟದಲ್ಲಿ ನೆಲೆಸಿದ್ದಾನೆ.

ಕಂದಗಾಲ ಅಗ್ರಹಾರವು ಹೊಯ್ಸಳರ ಕಾಲದಲ್ಲಿ ಅಂದರೆ ಕ್ರಿ.ಶ. ೧೨ನೇ ಶತಮಾನದಲ್ಲಿ ಬೆಳಕಿಗೆ ಬಂದಿತು. ಪಕ್ಕದಲ್ಲಿ ಪಾರ್ವತಿ ದೇವಿಯ ಗುಡಿಯಿದೆ. ಪ್ರತಿವರ್ಷ ವೈಶಾಕಮಾಸದ ಪೂರ್ಣಿಮೆ ದಿನ ಜಾತ್ರೆ, ರಥೋತ್ಸವ ನಡೆಯುತ್ತದೆ.

**ತ್ರಿಯಂಬಕೇಶ್ವರ ದೇವಸ್ಥಾನ**

ಚಾಮರಾಜನಗರದಿಂದ ೩೪ ಕಿ.ಮೀ.
ಗುಂಡ್ಲುಪೇಟೆಯಿಂದ ೧೦ ಕಿ.ಮೀ.



ತೆರಕಣಾಂಬಿಯಿಂದ ೮ ಕಿ.ಮೀ. ದೂರದಲ್ಲಿದೆ. ಹದಿನಾಡು (ಮೈಸೂರು) ಕೇರಳ ಮತ್ತು ತಮಿಳುನಾಡು ೩ ಗಡಿಕಲ್ಲುಗಳು ಸೇರುವ ಜಾಗದಲ್ಲಿ ಲಂಬಕರ್ಣರಾಯ ಎಂಬುವನು ತ್ರಿಯಂಬಕೇಶ್ವರನ್ನ ಪ್ರತಿಷ್ಠಾಪಿಸಿದನು ಎಂಬ ನಂಬಿಕೆ ಇದೆ.

ದೇವಾಲಯವು ಚಚ್ಚೌಕಾರದಲ್ಲಿ ನಿರ್ಮಿಸಲಾಗಿದೆ. ಪೂರ್ವದ್ವಾರದ ಮುಂದೆ ಭವ್ಯವಾದ ದೀಪಸ್ತಂಭ, ಬಲಿಪೀಠ, ನಂದಿಮಂಟಪಗಳಿವೆ. ದೇವಾಲಯದ ಉತ್ತರದಿಕ್ಕಿಗೆ ಪಾರ್ವತಿಗುಡಿ, ಪಶ್ಚಿಮಕ್ಕೆ ಪಂಚಲಿಂಗೇಶ್ವರ ಗುಡಿಗಳಿವೆ. ನೈರುತ್ಯ ದಿಕ್ಕಿನಲ್ಲಿ ೫೪ ಕಂಬಗಳುಳ್ಳ ಕಲ್ಯಾಣ ಮಂಟಪವಿದೆ. ಆಗ್ನೇಯ ಮೂಲೆಗೆ ಎರಡು ಗರ್ಭ ಗುಡಿಯಿದ್ದು, ಒಂದು ಮಹಿಷಾಸುರ ಮರ್ದಿನಿ, ಮತ್ತೊಂದರಲ್ಲಿ ಸಪ್ತ ಮಾತೃಕೆಗಳ ವಿಗ್ರಹಗಳೀವೆ. ಗರ್ಭಗುಡಿಯ ಮಧ್ಯದಲ್ಲಿ ತ್ರಿಯಂಬಕೇಶ್ವರ ಶಿವಲಿಂಗವಿದೆ. ನವರಂಗವು ದೊಡ್ಡದಾಗಿದ್ದು, ವಿಜಯನಗರದ ಶೈಲಿಯನ್ನು ಒಳಗೊಂಡಿದೆ.

## ಚಂದ್ರನಾಥ ಬಸಿದಿ ಕೆಲಸೂರು

ಚಾಮರಾಜನಗರದಿಂದ ೩೪ ಕಿ.ಮೀ.
ಗುಂಡ್ಲುಪೇಟೆಯಿಂದ ೧೦ ಕಿ.ಮೀ.




ಕೆಲಸೂರು ತೆರಕಣಾಂಬಿಯಿಂದ ೬ ಕಿ.ಮೀ. ದೂರದಲ್ಲಿದೆ. ೫.೬ನೇ ಶತಮಾನಕ್ಕೆ ಸೇರಿರುವ ಚಂದ್ರನಾಥ ಬಸಿದಿ ಇದೆ. ೮ನೇ ತೀರ್ಥಂಕರರಾದ ಚಂದ್ರನಾಥರ ವಿಗ್ರಹವು ಐದು ಅಡಿ ಎತ್ತರವಿದ್ದು, ಲೆಪ್ಪ ಮತ್ತು ಮಣ್ಣಿನಿಂದ ಮಾಡಿದ್ದಾರೆ. ಸುಕನಾಸಿಯಲ್ಲಿ ಜ್ವಾಲಮಾಲಿನಿ, ಮತ್ತು ವಿಜಯ, ಯಕ್ಷರ ಐದು ಅಡಿ ಮೂರ್ತಿಗಳಿವೆ. ದೇವಾಲಯದ ಸುಕನಾಸಿಯಲ್ಲಿ ಬಣ್ಣ ಬಣ್ಣದ ಗೋಡೆ, ವಿನ್ಯಾಸವಿದ್ದು, ಸುಕನಾಸಿಯ ಬಾಗಿಲಿಗೆ ಅನೇಕ ಸೂಕ್ಷ್ಮ ಕೆತ್ತನೆಗಳಿವೆ. ಅಡಿಪಾಯದ ಕಲ್ಲುಗಳ ಮೇಲೆ ತಮಿಳು ಲಿಪಿಯ ಬರಹ, ಕಲ್ಪವಲ್ಲಿಯ ಚಿತ್ರಗಳು, ಎಲೆಯ ಆಕಾರದ ಚಿತ್ರಗಳು ಕಂಡುಬರುತ್ತವೆ. ಚೋಳರು, ಮೈಸೂರಿನ ಒಡೆಯರು ಜೀರ್ಣೋದ್ಧಾರ ಮಾಡಿಸಿದ್ದಾರೆ. ಇದಕ್ಕೆ 'ಸರ್ವ ಲೋಕಾಶ್ರಯ ಜಿನಾಲಯ' ಎಂಬ ಹೆಸರು ಇದೆ.

***